# ಚಂದನಾಂಬಿಕೆ

ಶ್ರೀಮತಿ ಹೆಚ್.ಡಿ. ಜಯಪದ್ಮ ಕುಮಾರ್



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಚಂದನಾಂಬಿಕೆ

ಲೇಖಕರು
**ಶ್ರೀಮತಿ ಹೆಚ್.ಡಿ. ಜಯಪದ್ಮ ಕುಮಾರ್**
ಪ್ರಧಾನ ಸಂಪಾದಕರು
**ಡಾ॥ ಎಂ. ಎ. ಜಯಚಂದ್ರ**

**ಕನ್ನಡ ಪುಸ್ತಕ ಪ್ರಾಧಿಕಾರ**
ಕನ್ನಡ ಭವನ, ಬೆಂಗಳೂರು - ೨.

# CHANDANAMBIKE

written by

**Smt. H.D. Jayapadma Kumar**

First Print 2005

© Author

Pages (x +21) Price : Rs. 10/-

Copies : 2000

**ISBN : 181-7713-184-2**

Published by

**N. Tippeswamy**

Administrative Officer

Kannada Pustaka Pradikara

Kannada Bhavan

J.C. Road, Bangalore - 560 002

D.T.P.

**Prashanth Enterprises**

Bangalore - 560 028

Printer :

**SREERANGA PRINTERS PVT LTD**

517, Samudra Gupta Maurya Road,

Bhavaninagar, Bangalore- 19

Ph : 2667 9333, 2652 4757

# ಮುನ್ನುಡಿ

ಚಂದನಾಂಬಿಕೆ ಓರ್ವ ಐತಿಹಾಸಿಕ ಮಹಿಳೆ. ಭಗವಾನ್ ಮಹಾವೀರರ ಸಮವಸರಣದಲ್ಲಿ (ಧಾರ್ಮಿಕ ಸಭೆಯಲ್ಲಿ) ಮುವತ್ತಾರು ಸಾವಿರ ಆರ್ಯಿಕೆ (ಜೈನ ಸಂನ್ಯಾಸಿ)ಯರಿಗೆ ನಾಯಕಿಯಾಗಿದ್ದಳು. ಚಂದನೆ ಅಪಹರಣಕ್ಕೆ ಈಡಾದ ; ಶೋಷಣೆ, ಈರ್ಷೆಗೆ ಒಳಗಾದ ; ದಾಸ್ಯಕ್ಕೆ ತುತ್ತಾದ ಅಬಲೆಯರ ಪ್ರತೀಕವಾಗಿದ್ದಾಳೆ. ಶ್ರಮಣಮುನಿ ಮಹಾವೀರರಿಗೆ ಆಹಾರದಾನ ಮಾಡುವುದರ ಮೂಲಕ ಧಾರ್ಮಿಕ ಜಗತ್ತನ್ನು ಪ್ರವೇಶಿಸಿ, ಸಾಧನೆಯ ಶಿಖರವನ್ನೇರಿದಳು. ಆಕೆಯ ಚಾರಿತ್ರಿಕ ಸಂಗತಿಗಳು ಆಧುನಿಕ ದೃಷ್ಟಿಗೆ ತಕ್ಕಂತೆ ಶುದ್ಧರೂಪದಲ್ಲಿ ದೊರೆಯುವುದಿಲ್ಲ. ಆದರೆ ಧಾರ್ಮಿಕ ಸ್ವಭಾವದಲ್ಲಿ ಆಕೆಯ ಜೀವನ ಜೈನ ಸಾಹಿತ್ಯದಲ್ಲಿ ಚಿತ್ರಿತವಾಗಿದೆ. ದಿಗಂಬರ, ಶ್ವೇತಾಂಬರ ಎರಡೂ ಸಂಪ್ರದಾಯದ ಪುರಾಣ, ಕಾವ್ಯಗಳಲ್ಲಿ ಆಕೆಯ ಬದುಕಿನ ಘಟನೆಗಳು ಅಲ್ಪಸ್ವಲ್ಪ ಭಿನ್ನತೆಯೊಂದಿಗೆ ದೊರೆಯುತ್ತವೆ.

ಶ್ವೇತಾಂಬರ ಸಾಹಿತ್ಯದ ಪ್ರಕಾರ ಚಂದನೆಯ ಕಥೆಯ ರೂಪರೇಖೆ ಹೀಗಿದೆ: ''ಕೌಶಂಬಿಯ ರಾಜ ಶತಾನಿಕ ಮತ್ತು ಚಂಪಾನಗರಿಯ ರಾಜ ದಧಿವಾಹನ, ಇವರಿಬ್ಬರು ಕ್ರಮವಾಗಿ ವೈಶಾಲಿ ಗಣತಂತ್ರದ ಅಧ್ಯಕ್ಷ ಮಹಾರಾಜ ಚೇಟಕನ ಪುತ್ರಿಯರಾದ ಮೃಗಾವತಿ ಹಾಗೂ ಧಾರಿಣಿಯರನ್ನು ವಿವಾಹವಾಗಿದ್ದರು. ಶತಾನಿಕನಲ್ಲಿ ರಾಜ್ಯ ಲಾಲಸೆ ಗುಪ್ತವಾಗಿತ್ತು. ಆದ್ದರಿಂದ ಅನುಕೂಲ ಸಂದರ್ಭ ನೋಡಿ ಚಂಪಾನಗರದ ಮೇಲೆ ಆಕ್ರಮಣಮಾಡಿ, ರಾಜಧಾನಿಯನ್ನು ಲೂಟಿ ಮಾಡಿದನು. ಆಗ ಸೌಂದರ್ಯಲೋಭಿಯಾದ ಆತನ ಸೇನಾಪತಿ, ರಾಣಿ ಧಾರಿಣಿಯನ್ನು, ಆಕೆಯ ಪುತ್ರಿ ವಸುಮತಿಯನ್ನು ಸೆರೆಹಿಡಿದನು. ಸೇನಾಪತಿ ಕಾಮುಕನಾಗಿ ರಾಣಿಯನ್ನು ಇಚ್ಛಿಸಿದಾಗ, ಆಕೆ ತನ್ನ ಶೀಲ ರಕ್ಷಣೆಗಾಗಿ ಪ್ರಾಣತ್ಯಾಗ ಮಾಡಿದಳು. ಈ ಅನಿರೀಕ್ಷಿತ ಘಟನೆಯಿಂದ ಭೀತಿಗೊಂಡ ಸೇನಾಪತಿ, ವಸುಮತಿ ರಾಜಕುಮಾರಿಯನ್ನು ಕುದೃಷ್ಟಿಯಿಂದ ನೋಡದೆ ದಾಸಿಯಂತೆ ಸ್ವಗೃಹದಲ್ಲಿರಿಸಿಕೊಂಡನು.

ಆದರೆ ತನ್ನ ಪತ್ನಿಯ ಉಪಟಲಕ್ಕೆ ಹೆದರಿ ವಸುಮತಿಯನ್ನು ಕೌಶಂಬಿ ಪೇಟೆಯಲ್ಲಿ ಮಾರಾಟಕ್ಕಿರಿಸಿದನು. ಅವಳ ಅನುಪಮ ರೂಪಿಗೆ ಮಾರುಹೋದ ಒಬ್ಬ ಗಣಿಕೆ ಅಧಿಕ ಧನ ನೀಡಿ ಖರೀದಿಸಿದಳು. ಆಗ ವಸುಮತಿ ವೇಶ್ಯಾವೃತ್ತಿಗೆ ಪ್ರತಿಭಟಿಸಿ ಗಲಾಟೆಮಾಡಿದಾಗ, ಅಲ್ಲಿಗೆ ಆಕಸ್ಮಿಕವಾಗಿ ಆಗಮಿಸಿದ ಧನವಾಹ ಶ್ರೇಷ್ಠಿ ಕರುಣೆಯಿಂದ ಆಕೆಯನ್ನು ಖರೀದಿಸಿ, ಅವಳನ್ನು ಮಗಳಂತೆ ಸ್ವೀಕರಿಸಿದನು. ಆಕೆಯ ಶೀಲ ಸ್ವಭಾವದಿಂದ ಪ್ರಭಾವಿತನಾಗಿ 'ಚಂದನಾ' ಎಂದು ಹೆಸರಿಸಿದನು. ಆಕೆ ಅದೇ ಹೆಸರಿನಿಂದಲೇ ಮುಂದೆ ಪರಿಚಿತಳಾದಳು.

ಆ ಶ್ರೇಷ್ಠಿ ಪತ್ನಿಯ ಹೆಸರು ಮೂಲ. ಆಕೆ ಈರ್ಷೆಯಿಂದ ಚಂದನೆಯನ್ನು ಕಂಡಳು. ತನ್ನ ಚಲುವಿನಿಂದ ಇಂದಲ್ಲ ನಾಳೆ ತನ್ನ ಸವತಿ ಆಗಬಹುದೆಂದು ಅನುಮಾನಿಸಿ ಭಯಗೊಂಡಳು. ಶ್ರೇಷ್ಠಿ ಪರವೂರಿಗೆ ತೆರಳಿದ್ದಾಗ, ಚಂದನೆಯ ಆಕರ್ಷಕ ಕೇಶರಾಶಿಯನ್ನು ಕತ್ತರಿಸಿ ದಾಸಿಯ ಉಡುಪನ್ನು ನೀಡಿ, ಕೈಕಾಲುಗಳಿಗೆ ಬೇಡಿಗಳನ್ನು ತೊಡಿಸಿ, ನೆಲಮಾಳಿಗೆಯಲ್ಲಿ ಸೆರೆಯಿಟ್ಟು ಅತಿ ಸಾಧಾರಣ ಆಹಾರವನ್ನು ನೀಡಿದಳು. ಇಂಥ ಸನ್ನಿವೇಶದಲ್ಲಿ ಮಹಾಮುನಿಯಾಗಿದ್ದ ಮಹಾವೀರ ಸ್ವಾಮಿ ಭಿಕ್ಷೆಗಾಗಿ ಕೌಶಂಬಿಗೆ ಆಗಮಿಸಿದರು. ಆಗ ತನ್ನಲ್ಲಿದ್ದ ಸಾಧಾರಣ ಆಹಾರವನ್ನೇ ಮಹಾವೀರರಿಗೆ ದಾನಮಾಡಿ ಪುನೀತಳಾದಳು. ಬಂಧ ಮುಕ್ತಳಾದಳು. ಮುಂದೆ ಭಗವಂತನ ಶಿಷ್ಯೆಯಾಗಿ ಆರ್ಯಿಕಾ ಸಮಾಜಕ್ಕೆ ನಾಯಕಿಯಾಗಿದ್ದಳು.''

ಕರ್ನಾಟಕದಲ್ಲಿ ಪ್ರಚಲಿತವಿರುವ ಜೈನ ಸಾಹಿತ್ಯವೆಲ್ಲ ದಿಗಂಬರ ಸಂಪ್ರದಾಯದ್ದು. ಕನ್ನಡದ ಎಲ್ಲ ವರ್ಧಮಾನ ಪುರಾಣಕಾವ್ಯಗಳಲ್ಲಿ ಹಾಗೂ ಚಾವುಂಡರಾಯ ಪುರಾಣದಲ್ಲಿ ಚಂದನೆಯ ಕಥೆ ಪ್ರಮುಖ ಭಾಗವಾಗಿ ಬರುವುದು. ಚಂದನೆಯನ್ನೇ ಕುರಿತ ತ್ರಿಪದಿ ಛಂದಸ್ಸಿನ ಅಜ್ಞಾತ ಕವಯಿತ್ರಿಯ ಕಾವ್ಯವೊಂದು ಕನ್ನಡದಲ್ಲಿ ದೊರೆಯುವುದು. ಇಲ್ಲೆಲ್ಲ ಚಂದನೆ ಚೇಟಕ ಮಹಾರಾಜನ ಕಿರಿಯ ಮಗಳು ; ಶ್ವೇತಾಂಬರ ಸಂಪ್ರದಾಯವಂತೆ ಚೇಟಕನ ಮೊಮ್ಮಗಳಲ್ಲ. ಇದು ಎರಡು ಸಂಪ್ರದಾಯಗಳಲ್ಲಿ ಕಂಡುಬರುವ ಪ್ರಮುಖ ವ್ಯತ್ಯಾಸವಾಗಿದೆ.

ಅಹಿಂಸಾ ಪ್ರಧಾನವಾದ ಜೈನ ಧರ್ಮದ ತತ್ತ್ವಗಳು, ಗ್ರಂಥಗಳು, ಆಚಾರ್ಯರು ಹಾಗೂ ಮಹಾನ್ ವ್ಯಕ್ತಿಗಳನ್ನು ಜನಸಾಮಾನ್ಯರಿಗೆ ಪರಿಚಯಿಸಬೇಕು ಎಂಬ ಮಹೋತ್ಸವದ ರಾಜ್ಯ ಸಮಿತಿಯ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯದ ಗೃಹ ಸಚಿವರಾದ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಅಭಿಪ್ರಾಯದಂತೆ ಪ್ರಕಟಣಾ ಸಮಿತಿಯು ''ಚಂದನಾಂಬಿಕೆ''ಯ ಬಗ್ಗೆ ಕಿರು ಪುಸ್ತಕ ಹೊರತರಲು ತೀರ್ಮಾನಿಸಿತು. ಸಮಿತಿಯ ಕರೆಗೆ ಓಗೊಟ್ಟು ಭದ್ರಾವತಿಯಲ್ಲಿ ಜನಪ್ರಿಯ ಅಧ್ಯಾಪಕರಾಗಿರುವ ಶ್ರೀಮತಿ ಹೆಚ್.ಡಿ. ಜಯಪದ್ಮ ಕುಮಾರ್ ಅವರು ದಿಗಂಬರ ಜೈನ ಸಾಹಿತ್ಯವನ್ನು ಆಧರಿಸಿ ಈ ಪುಸ್ತಕವನ್ನು ಸರಳ ಸುಂದರಾಗಿ ಸಿದ್ಧಪಡಿಸಿಕೊಟ್ಟಿದ್ದಾರೆ. ಅವರಿಗೆ ಪ್ರಕಟಣಾ ಸಮಿತಿ ಆಭಾರಿಯಾಗಿದೆ.

**ಡಾ.ಎಂ.ಎ. ಜಯಚಂದ್ರ**

ಅಧ್ಯಕ್ಷರು

ಭಗವಾನ್ ಮಹಾವೀರ ೨೬೦೦ನೇಯ ಜನ್ಮಕಲ್ಯಾಣ

ಮಹೋತ್ಸವದ ಪ್ರಕಟಣಾ ಸಮಿತಿ, ಬೆಂಗಳೂರು

## ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು - ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು - ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿ ಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿ ಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ , ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾದೇವಿಯವರ ಜ್ಞಾನಶಕ್ತಿ ೨ + ೨ = ೪ ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹು ಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ.

ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು? ಇದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿ ಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ - ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ ಬೆಳೆದು ಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಂಕಸಾಲೆ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದರ್ಶಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ, ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾ ವಿಶೇಷ ಸಿರಿಯುಳ್ಳೆಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ.

ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಅದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲ ಭಾವದಲ್ಲಿ ಅಭಿವ್ಯಕ್ತಿಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪಾರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮೂಲಕ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡ ಜ್ಞಾನಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ.

ಹಿಂದಣ ಅನಂತವನು ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ
ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ
ಕಂಡು ಬಲ್ಲವರಾರಯ್ಯ
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ.

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು

ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನ ಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರ ಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕ್ಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆದ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

* * * * *

ಜೈನಧರ್ಮಕ್ಕೆ ಐದುಸಾವಿರ ವರ್ಷಗಳ ಪ್ರಾಚೀನ ಇತಿಹಾಸವಿದೆ. ತಾನು ಬೋಧಿಸಿದ ಅಹಿಂಸೆ ಅಪರಿಗ್ರಹ ನೀತಿ, ಸಮ್ಯಕ್‌ತತ್ವ ಹಾಗೂ ಅನೇಕಾಂತವಾದಗಳ ಪ್ರತಿಪಾದನೆಯ ಮುಖೇನ ಈ ನೆಲದ ಜೀವನಗತಿಯ ಮೇಲೆ ಅಪಾರ ಪರಿಣಾಮವನ್ನು ಉಂಟುಮಾಡಿದ ಧರ್ಮವಿದು. ಕನ್ನಡ ಸಾಹಿತ್ಯದ ಮಟ್ಟಿಗಂತೂ ಜೈನಧರ್ಮದ ಪ್ರಭಾವ ಪ್ರೇರಣೆಗಳು ನಖಮಾಂಸ ಭಾವದ ನೆಲೆಯವು. ಕನ್ನಡ ನೆಲದಲ್ಲಿ ನಡೆದ ಹಲವು ಧಾರ್ಮಿಕ ಸಂಘರ್ಷಗಳ ಮುಖಾಮುಖಿತ್ವದಲ್ಲಿ ಜೈನಧರ್ಮದ ಏಳುಬೀಳುಗಳು ಕನ್ನಡ ಸಂಸ್ಕೃತಿಯ ಜೀವನೇತಿಹಾಸವನ್ನು ಪ್ರತಿಬಿಂಬಿಸುವುದೇ ಆಗಿದೆ.

ಭಗವಾನ್ ಮಹಾವೀರರ ೨೬೦೦ನೆಯ ಜನ್ಮಕಲ್ಯಾಣ ಮಹೋತ್ಸವದ ಅಂಗವಾಗಿ ಜೈನಧರ್ಮಕ್ಕೆ ಸಂಬಂಧಿಸಿದ ಕೆಲವು ವಿಚಾರಗಳ ಪುಸ್ತಿಕೆಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಸಮಣಸುತ್ತಂ., ಅನೇಕಾಂತವಾದ, ಅಹಿಂಸೆ, ಹೇಮಚಂದ್ರ , ಮಹಾವೀರವಾಣಿ, ಸಾಮ್ರಾಟ್ ಶ್ರೇಣಿಕ ಬಿಂಬಸಾರ, ಮಹಾಪುರಾಣ, ಕುಂದಾಕುಂದಾಚಾರ್ಯ, ಚಂದನಾಂಬಿಕೆ - ಇವೇ ಈ ಪುಸ್ತಿಕೆಗಳು. ಧಾರ್ಮಿಕ ವಿಚಾರಗಳು ಕೇವಲ ಪಂಡಿತಮಾನ್ಯರ ಜಿಜ್ಞಾಸೆಯ ವಿಚಾರಗಳಾಗಿ

ಮಾತ್ರ ಉಳಿಯದೆ ಶ್ರೀಸಾಮಾನ್ಯರ ಅರಿವಿಗೆ ಅನ್ನವಾಗಬೇಕು ಎಂಬುದು ಇಂಥ ಪ್ರಕಟಣೆಯ ಹಿಂದಿನ ಉದ್ದೇಶ.

ಭಗವಾನ್ ಮಹಾವೀರರ ೨೬೦೦ನೇಯ ಜನ್ಮಕಲ್ಯಾಣ ಮಹೋತ್ಸವದ ರಾಜ್ಯ ಸಮಿತಿಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಅಪೇಕ್ಷೆಗೆ ಅನುಸಾರವಾಗಿ ಈ ಪ್ರಕಟಕಾರ್ಯ ನಡೆಯುತ್ತಿದೆ. ಸಂಪಾದಕ ಮಂಡಳಿಯವರು ವಿಷಯಗಳ ಆಯ್ಕೆ ಮಾಡಿ, ವಿಷಯತಜ್ಞರಿಂದ ಬರೆಸುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಸಂಪಾದಕರಾಗಿ ಡಾ॥ ಎಂ.ಎ. ಜಯಚಂದ್ರ ಅವರು ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಈ ಎಲ್ಲ ಮಹನೀಯರಿಗೆ ಕನ್ನಡ ಪುಸ್ತಕ ಪ್ರಾಧಿಕಾರವು ಆತ್ಮೀಯ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ದಿನಾಂಕ : ೮.೯.೨೦೦೫     ಪ್ರೊ। ಎಸ್.ಜಿ. ಸಿದ್ಧರಾಮಯ್ಯ
ಸ್ಥಳ : ಬೆಂಗಳೂರು     ಅಧ್ಯಕ್ಷರು

# ಚಂದನಾಂಬಿಕೆ

ಚಂದನಾಂಬಿಕೆಯು ಶ್ರೇಷ್ಠ ಜನಭಕ್ತೆ. ಇಪ್ಪತ್ತನಾಲ್ಕನೆಯ ತೀರ್ಥಂಕರರಾದ ಮಹಾವೀರಸ್ವಾಮಿಯ ಅನನ್ಯ ಭಕ್ತೆ. ಅಷ್ಟೇ ಅಲ್ಲ ಮಹಾವೀರರ ಚಿಕ್ಕಮ್ಮನೂ ಹೌದು. ಮಹಾವೀರಸ್ವಾಮಿಯು ಸಮವಸರಣದಲ್ಲಿ (ಮಹಾವೀರರಿಗೆ ಜ್ಞಾನೋದಯವಾದ ಮೇಲೆ ಧರ್ಮೋಪದೇಶಕ್ಕಾಗಿ ದೇವೇಂದ್ರನು ನಿರ್ಮಿಸಿದ ಧಾರ್ಮಿಕ ಸಭೆ) ಮೂವತ್ತಾರು ಸಾವಿರ ಆರ್ಯಿಕೆಯರಿದ್ದರು. ಚಂದನೆಯು ಅವರೆಲ್ಲರಿಗೂ ನಾಯಕಿಯಾಗಿದ್ದಳು. ಈಕೆ ರಾಜಕುಮಾರಿಯಾದರೂ ವಿಧಿವಶದಿಂದ ನಾನಾ ಪ್ರಕಾರದ ಕಷ್ಟಗಳಿಗೆ ಸಿಲುಕಿದಳು. ಆದರೆ ಪೂರ್ವಪುಣ್ಯ ಮತ್ತು ಭಗವಂತನ ಧ್ಯಾನದಿಂದ ಕಷ್ಟಗಳ ಸಂಕೋಲೆಯಿಂದ ಮುಕ್ತಳಾದಳು. ಸಾಧ್ವಿ ಚಂದನೆಯ ಪುಣ್ಯಚರಿತ್ರೆಯನ್ನು ಆಲಿಸುವವರಿಗೆ ಪುಣ್ಯ ಲಬ್ಧಿಯಾಗುತ್ತದೆ. ಆಕೆಯ ಜೀವನದ ಯಶೋಗಾಥೆ ಹೀಗಿದೆ-

ಭರತ ಕ್ಷೇತ್ರದಲ್ಲಿ ವೈಶಾಲಿ ಎಂಬ ನಾಡು. ಅದು ಅತ್ಯಂತ ವಿಸ್ತಾರವಾದುದು. ಅಲ್ಲದೆ ಸಕಲ ಸಂಪತ್ತಿನಿಂದ ಕೂಡಿತ್ತು. ಐಶ್ವರ್ಯಕ್ಕೆ, ವಿದ್ಯೆಗೆ, ಕಲೆಗಳಿಗೆ ಮತ್ತು ಶೌರ್ಯಕ್ಕೆ ಆ ನಾಡು ತವರೂರಾಗಿತ್ತು. ಅಲ್ಲಿನ ಪ್ರಕೃತಿ ಸೌಂದರ್ಯವನ್ನು ವರ್ಣಿಸಲಸದಳ. ಸಾಲು ಮರಗಳಿಂದ ಆ ನಾಡಿನ ಬೀದಿಗಳು ಜನರ ಕಣ್ಣನ ಸೆಳೆಯುತ್ತಿದ್ದವು. ಆ ನಾಡಿನಲ್ಲಿ ಸುವರ್ಣ ಕಲಶದ ಮನೆಗಳೂ ಇದ್ದು ಆ ನಾಡು ಅತ್ಯಂತ ವೈಶಿಷ್ಟ್ಯವಾಗಿತ್ತು. ಅಲ್ಲಿನ ಮನೆಗಳು

ತಳಿರುತೋರಣಗಳಿಂದ ರಂಗವಲ್ಲಿಯ ಲಲಿತಕಲೆಗಳಿಂದ ಶೋಭಿಸುತ್ತಿದ್ದವು. ಆ ನಾಡು ಎಂದೂ ಕ್ಷಾಮವನ್ನೇ ಕಂಡಿರಲಿಲ್ಲ. ಸಕಾಲದಲ್ಲಿ ಮಳೆಬೆಳೆ ಆಗುತ್ತಿದ್ದುದರಿಂದ ದವಸ ಧಾನ್ಯಗಳಿಂದ ತುಂಬಿ ಸುಭಿಕ್ಷವಾಗಿತ್ತು. ಆ ನಾಡು ನಿತ್ಯ ಸುಖದ ಆಕರವಾಗಿತ್ತು. ಒಟ್ಟಿನಲ್ಲಿ ವೈಶಾಲಿಯ ಜನರೆಲ್ಲರೂ ಆನಂದಸಾಗರದಲ್ಲಿ ಮುಳುಗಿದ್ದರು. ಆ ನಾಡು ಸ್ವರ್ಗವನ್ನೇ ಸೂರೆಗೊಂಡಂತಿತ್ತು. ದೇವೇಂದ್ರನಿಗೆ ಸಮಾನನಾದ ಚೇಟಕ ಎಂಬುವನು ಅಲ್ಲಿಯ ಮಹಾರಾಜನಾಗಿದ್ದನು. ಆತನು ಪ್ರಜಾಪ್ರೇಮಿಯೂ ಆಗಿದ್ದನಲ್ಲದೆ ದೈವಭಕ್ತನೂ ಆಗಿದ್ದನು. ಆತನ ಪತ್ನಿ ಸುಭದ್ರ. ಈಕೆಯು ಸುಂದರಿಯೂ, ಸುಶೀಲಳೂ ಜೊತೆಗೆ ದೈವಭಕ್ತಳೂ ಆಗಿದ್ದಳು. ರಾಜರಾಣಿಯರಿಬ್ಬರೂ ವೈಶಾಲಿಯ ಜನತೆಗೆ ತಂದೆ ತಾಯಿಯಂತಿದ್ದರು.

ಇವರಿಗೆ ದಶರತ್ನಗಳಂತೆ ಧನಧತ್ತ, ಧನಭದ್ರ, ಉಪೇಂದ್ರ, ಸುದತ್ತ, ಸಿಂಹಭದ್ರ, ಕಂಭೋಜ, ಅಕಂಪನ, ಪತಂಗ, ಪ್ರಭಂಜನ ಮತ್ತು ಪ್ರಭಾರಸರೆಂಬ ಹತ್ತು ಮಂದಿ ಸುಪುತ್ರರಿದ್ದರು. ಚೇಟಕನು ಉತ್ತಮ ಗುರುಗಳಿಂದ ತನ್ನ ಮಕ್ಕಳಿಗೆ ಶಿಕ್ಷಣ ಕೊಡಿಸಿದ್ದನು. ಇವರೆಲ್ಲರೂ ಅರವತ್ನಾಲ್ಕು ವಿದ್ಯೆಗಳಲ್ಲಿ ಪಾರಂಗತರಾಗಿದ್ದರು. ಧಾರ್ಮಿಕ ಶಿಕ್ಷಣವನ್ನು ಪಡೆದಿದ್ದರಿಂದ ಸದ್ಗುಣ ಸಂಪನ್ನರೂ ಧರ್ಮಭೀರುಗಳೂ ಆಗಿದ್ದರು. ಈ ಗಂಡುಮಕ್ಕಳಲ್ಲದೆ ಚೇಟಕನಿಗೆ ಪ್ರಿಯಕಾರಿಣಿ, ಮೃಗಾವತಿ, ಸುಪ್ರಭ, ಪ್ರಭಾವತಿ, ಚೇಳಿನಿ, ಜೇಷ್ಠಾ ಮತ್ತು ಚಂದನಾಂಬಿಕೆ ಎಂಬ ಹೆಣ್ಣುಮಕ್ಕಳಿದ್ದರು. ಚೇಟಕ ಮಹಾರಾಜನು ತನ್ನ ಹೆಣ್ಣು ಮಕ್ಕಳಿಗೂ ಎಲ್ಲಾ ಪ್ರಕಾರದ ಶಿಕ್ಷಣ ಕೊಡಿಸಿದ್ದನು.

ಚೇಟಕರಾಜನು ಪ್ರಿಯಕಾರಿಣಿ, ಮೃಗಾವತಿ, ಪ್ರಭಾವತಿ, ಸುಪ್ರಭ ಇವರ ವಿವಾಹವನ್ನು ವಿಜೃಂಭಣೆಯಿಂದ ನೆರವೇರಿಸಿದನು. ಚೇಳಿನಿಯ ವಿವಾಹ ಶ್ರೇಣಿಕ ಎಂಬ ಮಹಾರಾಜನೊಂದಿಗೆ ಆಗುತ್ತದೆ. ಜೇಷ್ಠೆಯು ಲೌಕಿಕ ಜೀವನಕ್ಕೆ ಬೇಸತ್ತು ಹೋಗುತ್ತಾಳೆ. ಆಕೆಯ ಅತ್ತೆ ಯಶಸ್ವಿನಿ ಎಂಬುವಳು ಆರ್ಯಿಕೆಯಾಗಿರುತ್ತಾಳೆ. ಜೇಷ್ಠೆಯು ಆಕೆಯ ಬಳಿಗೆ ಹೋಗಿ ಆಕೆಯಿಂದ ಧರ್ಮೋಪದೇಶ ಪಡೆಯುತ್ತಾಳೆ ನಂತರ ಸನ್ಯಾಸ ದೀಕ್ಷೆಯನ್ನು ಸ್ವೀಕರಿಸುತ್ತಾಳೆ.

ಚೇಟಕನ ಕೊನೆಯ ಪುತ್ರಿಯಾದ ಚಂದನೆಯು ಚೆಲುವಿನ ಪುತ್ಥಳಿ. ಆಕೆಯನ್ನು ನೋಡಿದರೆ ಚಂದನದ ಗೊಂಬೆಯನ್ನು ನೋಡಿದಂತಾಗುತ್ತಿತ್ತು.

ಅಡಿಯಿಂದ ಮುಡಿಯವರೆಗೆ ಆಕೆಯ ದೇಹದಲ್ಲಿ ಸೌಂದರ್ಯ ಚಿಮ್ಮುತ್ತಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಆಕೆಯ ದಟ್ಟವಾದ ಹಾಗೂ ನೀಳವಾದ ಕಪ್ಪನೆಯ ಕೂದಲು ಎಲ್ಲರ ಗಮನ ಸೆಳೆಯುತ್ತಿತ್ತು. ತಂದೆ ತಾಯಿಯರಿಗಂತೂ ಆಕೆಯ ಮೇಲೆ ಅಪಾರ ಪ್ರೀತಿ. ಆಕೆಯನ್ನು ಬಲು ಮುದ್ದಿನಿಂದ ಸಾಕುತ್ತಿದ್ದರು. ಆಕೆಯನ್ನು ಸುಖದ ಸುಪ್ಪತ್ತಿಗೆಯಲ್ಲಿ ಓಲಾಡಿಸುತ್ತಿದ್ದರು. ಸೋದರ ಸೋದರಿಯರಿಗಂತೂ ಚಂದನೆಯನ್ನು ಕಂಡರೆ ಬಲು ಅಕ್ಕರೆ. ಬಂಧು ಬಾಂಧವರಿಗೆ ಆಕೆಯನ್ನು ಕಂಡರೆ ಅತಿಯಾದ ಮೋಹ. ಇಡೀ ವೈಶಾಲಿ ನಾಡಿಗೇ ಕಣ್ಮಣಿಯಂತಿದ್ದಳು.

ಚಂದನೆಯದು ಅತ್ಯಂತ ಶಾಂತ ಸ್ವಭಾವ. ಬಾಲ್ಯದಿಂದಲೂ ಆಕೆಗೆ ಧಾರ್ಮಿಕತೆಯ ಕಡೆಗೆ ಒಲವು. ಆಕೆ ಗುರುವಿನ ಬಳಿ ಧಾರ್ಮಿಕ ಶಿಕ್ಷಣ ಪಡೆದಿದ್ದಳು. ಆದ್ದರಿಂದ ಸಾತ್ವಿಕ ಸ್ವಭಾವವನ್ನು ಹೊಂದಿದ್ದಳು. ಸದಾ ಪುರಾಣಪುಣ್ಯ ಕಥೆಗಳ ಅಧ್ಯಯನ ಮಾಡುತ್ತಿದ್ದಳು. ವ್ರತ ನೇಮಗಳನ್ನು ಆಚರಿಸುತ್ತಿದ್ದಳು. ಮೊದಲೇ ಅನುಪಮ ಸುಂದರಿಯಾದ ಚಂದನೆಯ ಸೌಂದರ್ಯ ಸಾತ್ವಿಕತೆಯಿಂದಾಗಿ ದಿನ ದಿನಕ್ಕೆ ಮತ್ತಷ್ಟು ಹೆಚ್ಚುತ್ತಿತ್ತು. ಹೀಗೆ ದಿನಗಳು ಉರುಳುತ್ತಿದ್ದವು. ಯೌವನಕ್ಕೆ ಕಾಲಿಡುತ್ತಿದ್ದ ಚಂದನೆಯನ್ನು ಕಂಡು ತಂದೆತಾಯಿಯರು ಆಕೆಗೆ ವಿವಾಹ ಮಾಡಬೇಕೆಂದು ಯೋಚಿಸುತ್ತಿದ್ದರು.

ಹೀಗಿರಲು ವಸಂತ ಋತುವಿನ ಆಗಮನವಾಯಿತು. ಪ್ರಕೃತಿಯಲ್ಲಿ ಎಲ್ಲೆಲ್ಲೂ ಹಸಿರು ನಳನಳಿಸುತ್ತಿತ್ತು. ಮಾಮರದ ಚಿಗುರು ತಿಂದು ಕೋಗಿಲೆ ಇಂಚರಗೈಯುತ್ತಿತ್ತು. ಹೂವಿನ ಮಕರಂದ ಹೀರಿದ ದುಂಬಿಗಳು ಝೇಂಕಾರಗೈಯುತ್ತಿದ್ದು ಪ್ರಕೃತಿ ದೇವಿ ನವವಧುವಿನಂತೆ ಕಂಗೊಳಿಸುತ್ತಿದ್ದಳು. ಪ್ರಕೃತಿಯ ಕಣ್ಸೆಳೆಯುವ ಸೌಂದರ್ಯ ಕಂಡು ಚಂದನೆಯ ಮನ ಮುದಗೊಂಡಿತು. ಆಕೆಗೆ ಪ್ರಕೃತಿಯ ಹಸಿರು ಮಡಿಲಲ್ಲಿ ವಿಹರಿಸಬೇಕೆನಿಸಿತು. ಆಕೆ ತಂದೆತಾಯಿಯರ ಅಪ್ಪಣೆ ಪಡೆದು ಸಖಿಯರೊಂದಿಗೆ ಉದ್ಯಾನವನಕ್ಕೆ ಬಂದಳು. ಸಖಿಯರೊಂದಿಗೆ ಹಾಡಿ ನಲಿದಳು. ಗೆಳತಿಯರು ಪ್ರಕೃತಿ ಸೌಂದರ್ಯ ವೀಕ್ಷಿಸುತ್ತ ಅಲ್ಲಲ್ಲೇ ವಿಹರಿಸುತ್ತಿದ್ದಾಗ ಚಂದನೆಯು ಅಲ್ಲೇ ಮರಕ್ಕೆ ಕಟ್ಟಿದ್ದ ಸುಂದರವಾದ ಉಯ್ಯಾಲೆಯಲ್ಲಿ ಕುಳಿತು ಉಯ್ಯಾಲೆಯಾಡತೊಡಗಿದಳು. ಹಸಿರು ವನದ ಮಧ್ಯೆ ಆಕೆ ವನದೇವಿಯಂತೆ ಕಂಗೊಳಿಸುತ್ತಿದ್ದಳು.

ಆಗ ಅದೇ ಸಮಯದಲ್ಲಿ ಮನೋವೇಗನೆಂಬ ಗಂಧರ್ವನು ತನ್ನ ಪತ್ನಿಯೊಂದಿಗೆ ಆಕಾಶ ಮಾರ್ಗದಲ್ಲಿ ವಿಹರಿಸುತ್ತಿದ್ದನು. ಆತನ ದೃಷ್ಟಿ ಚೆಲುವೆಯಾದ ಚಂದನೆಯ ಮೇಲೆ ಬಿತ್ತು. ಆತನು ಅದುವರೆಗೂ ಅಂತಹ ಸುಂದರ ಹೆಣ್ಣನ್ನೇ ಕಂಡಿರಲಿಲ್ಲ. ಆಕೆಯ ಚೆಲುವು ಆತನ ಕಣ್ಣನ್ನು ಕುಕ್ಕಿತು. ಎಂದೂ ಯಾವ ಹೆಣ್ಣನ್ನೂ ಕಂಡು ಚಂಚಲಗೊಳ್ಳದ ಆತನ ಮನಸ್ಸು ವಿಚಲಿತವಾಯಿತು. ಏನಾದರೂ ಮಾಡಿ ಆಕೆಯನ್ನು ಪಡೆಯಲೇ ಬೇಕು ಎನ್ನಿಸಿತು. ಆದರೆ ಪಕ್ಕದಲ್ಲೇ ಪತ್ನಿ ಇದ್ದುದರಿಂದ ಆತನ ಆಸೆಗೆ ಅಡ್ಡಿಯಾಯಿತು. ಚಂದನೆಯನ್ನು ಪಡೆಯುವುದಕ್ಕಾಗಿ ಮನಸ್ಸಿನಲ್ಲೇ ನಾನಾ ಬಗೆಯಾಗಿ ಚಿಂತಿಸಿ ತನ್ನ ಪಟ್ಟಣಕ್ಕೆ ಆ ಕ್ಷಣವೇ ಹಿಂದಿರುಗಿದನು.

ಆತನು ಸ್ವರೂಪಿಣಿ ಎಂಬ ವಿದ್ಯೆಯಲ್ಲಿ ಪಾರಂಗತನಾಗಿದ್ದನು. ಆತನು ಆ ವಿದ್ಯೆಯಿಂದ ತನ್ನದೇ ಇನ್ನೊಂದು ರೂಪವನ್ನು ಸೃಷ್ಟಿಸಿ ಆ ಪ್ರತಿರೂಪವನ್ನು ಸಿಂಹಾಸನದಲ್ಲಿ ಕೂರಿಸಿದನು. ತಕ್ಷಣವೇ ಚಂದನೆಯಿದ್ದ ಉದ್ಯಾನವನಕ್ಕೆ ಹಿಂದಿರುಗಿದನು. ನಗುನಗುತ್ತಾ ಉಯ್ಯಾಲೆಯಾಡುತ್ತಿದ್ದ ಚಂದನೆ ಬಳಿ ಬಂದನು. ಮುಂದಿನ ಪರಿಣಾಮವನ್ನು ಯೋಚಿಸದೆ ಆಕೆಯನ್ನು ಬಲಾತ್ಕಾರವಾಗಿ ಹಿಡಿದುಕೊಂಡು ತನ್ನ ರಾಜ್ಯಕ್ಕೆ ಎಳೆದು ತರುತ್ತಿದ್ದನು. ಚಂದನೆಯ ಸ್ಥಿತಿ ಗಿಡುಗನ ಕೈಯಲ್ಲಿನ ಗಿಳಿಯಂತಾಯಿತು. ಇತ್ತ ಗಂಧರ್ವನ ಪತ್ನಿಗೆ ಪತಿಯ ಬಗ್ಗೆ ಸಂಶಯ ಮೂಡಿತು. ತನ್ನ ಪತಿಯ ಕುತಂತ್ರದ ಅರಿವಾಗಿ ತನ್ನ ಪತಿಯ ಮೇಲೆ ಅಸಾಧ್ಯ ಕೋಪ ಬಂದಿತು. ಆಕೆಯು ಗಂಡನ ಪ್ರತಿರೂಪವಿದ್ದ ಸಿಂಹಾಸನವನ್ನು ಎಡಗಾಲಿನಿಂದ ಒದ್ದು, ಪತಿಯು ಹೋದ ದಾರಿಯ ಜಾಡನ್ನು ಹಿಡಿದು ಬರುತ್ತಿದ್ದಳು. ಗಂಧರ್ವನು ಎದುರಿಗೆ ಕೋಪದಿಂದ ಬರುತ್ತಿದ್ದ ಪತ್ನಿಯನ್ನು ನೋಡಿ ತನ್ನ ಕಾರ್ಯ ಕೆಟ್ಟಿತೆಂದು ಭಯಭೀತನಾದನು ಹಾಗೂ ತಾನು ಅಪಹರಿಸಿದ್ದ ಚಂದನೆಯನ್ನು ಭಯಂಕರವಾದ ಕಾಡಿನ ಮಧ್ಯೆ ಬಿಟ್ಟು ಬಿಟ್ಟನು.

ಆಗ ಸಂಧ್ಯಾವೇಳೆಯಾದ್ದರಿಂದ ಸೂರ್ಯನು ಪಶ್ಚಿಮದಲ್ಲಿ ಅಸ್ತಮಿಸಿದನು. ದಟ್ಟವಾದ ಕತ್ತಲು ಎಲ್ಲೆಲ್ಲೂ ಆವರಿಸಿತು. ಕಾಡು ಮೃಗಗಳ ಧ್ವನಿ ಎದೆ ನಡುಗಿಸುವಂತಿತ್ತು. ಏಕಾಂಗಿಯಾಗಿದ್ದ ಚಂದನೆಯ ಸ್ಥಿತಿ ಕರುಣಾಜನಕವಾಗಿತ್ತು. ಆ ದಟ್ಟವಾದ ಕಾಡಿನಲ್ಲಿ ಭಯಂಕರವಾದ ಕತ್ತಲಲ್ಲಿ ಚಂದನೆ ಭಯದಿಂದ ತರಗೆಲೆಯಂತೆ ಥರಥರನೆ ನಡುಗತೊಡಗಿದಳು. ಏಕಾಂಗಿಯಾಗಿದ್ದ ಆಕೆಗೆ ದಿಕ್ಕು

ತೋಚದಂತಾಯಿತು. ನಿಸ್ಸಹಾಯಕಳಾಗಿ ಭಯಹರನಾದ ಜಿನನ ಧ್ಯಾನ ಮಾಡತೊಡಗಿದಳು. ಭಯ ತನ್ನಿಂದ ತಾನೇ ದೂರವಾಯಿತು. ಏಕಾಂಗಿಯಾಗಿ ಕುಳಿತಿದ್ದ ಆಕೆಯ ಮನಸ್ಸಿನಲ್ಲಿ ನಾನಾ ಭಾವನೆಗಳು ಉದ್ಭವವಾದವು.

''ಅಕ್ಕಟ, ಈ ಸಂಸಾರ ದುಃಖಸಾಗರವಿದು, ಬಕ್ಕಟೆ ಬಯಲು ಬಳಗವು'' ಈ ಸಂಸಾರವು ಬರೀ ದುಃಖದ ಸಾಗರವಿದ್ದಂತೆ. ಇಲ್ಲಿಯ ಬಂಧು ಬಳಗ ಇತ್ಯಾದಿ ಎಲ್ಲವೂ ನೆಪಮಾತ್ರ, ಎಂದು ಚಿಂತಿಸುತ್ತಿದ್ದಳು. ಜೊತೆಗೆ ತಂದೆ ತಾಯಿ ಇತ್ಯಾದಿ ಬಂಧನವೆಲ್ಲ ಕೇವಲ ಮಾಯಾ ಮಂಜಿನ ಮಳೆಯಿದ್ದಂತೆ. ಸುಖದಲ್ಲಿ ಇರುವಾಗ ಎಲ್ಲರೂ ಜೊತೆಯಲ್ಲಿ ಇರುತ್ತಾರೆ. ಆದರೆ ಕಷ್ಟಕ್ಕೆ ಸಿಲುಕಿ ನರಳುವಾಗ ದುಃಖವನ್ನು ನಿವಾರಿಸಲು ಅಥವಾ ಹಂಚಿಕೊಳ್ಳಲು ಯಾರು ಬರುವುದಿಲ್ಲ. ಅವರವರ ದುಃಖವನ್ನು ಅವರವರೇ ಅನುಭವಿಸಬೇಕು. ನಮ್ಮ ದುಃಖವನ್ನು ಇತರರು ಹಂಚಿಕೊಳ್ಳುತ್ತಾರೆ ಎಂದು ಭಾವಿಸಿದರೆ ಅದು ನಮ್ಮ ಮೂರ್ಖತನ. ಈ ನಶ್ವರ ಪ್ರಪಂಚದ ಸಂಬಂಧವೆಲ್ಲಾ ಸುಳ್ಳು, ಭಗವಂತನೊಬ್ಬನೇ ಶಾಶ್ವತ ಬಂಧು'' ಎಂದೆಲ್ಲಾ ಚಿಂತಿಸತೊಡಗಿದಳು. ಆಕೆಗೆ ಒಂದೊಂದು ಕ್ಷಣವು ಒಂದೊಂದು ಯುಗವೆನಿಸತೊಡಗಿತು. ಬಗೆಬಗೆಯಾದ ಯೋಚನೆಯಲ್ಲೆ ರಾತ್ರಿಯನ್ನು ಬಹು ಕಷ್ಟದಿಂದ ಕಳೆದಳು. ಅಂತೂ ಇಂತೂ ಬೆಳಗಾಯಿತು.

ಆದರೆ ಆ ದಟ್ಟಡವಿಯಲ್ಲಿದ್ದ ಏಕಾಂಗಿಯಾಗಿದ್ದ ಚಂದನೆಗೆ ಎಲ್ಲಿಗೆ ಹೋಗಬೇಕು ? ಏನು ಮಾಡಬೇಕು ? ಎಂದು ತೋಚದೆ ಭಗವಂತನ ಧ್ಯಾನ ಮಾಡುತ್ತಾ ಒಂದು ಮರದ ಕೆಳಕೆ ಕುಳಿತುಬಿಟ್ಟಳು. ಆಗ ಬೇಟೆಗಾಗಿ ಕಾಳಶಂಬರನೆಂಬ ಬೇಡನು ಅಲ್ಲಿಗೆ ಬಂದನು. ಏಕಾಂಗಿಯಾಗಿ ಕುಳಿತಿದ್ದ ಸುಂದರಿ ಚಂದನೆಯನ್ನು ಕಂಡು ಆತನಿಗೆ ಅತ್ಯಾಶ್ಚರ್ಯವಾಯಿತು. ತಾನು ನಿರೀಕ್ಷಿಸಿದ್ದಕ್ಕಿಂತ ಒಳ್ಳೆ ಬೇಟೆಯು ಸಿಕ್ಕಿತೆಂದು ಸಂತೋಷಗೊಂಡನು. ಚಂದನೆಯ ರೂಪವನ್ನು ಕಂಡು ಆತನ ಮನಸ್ಸಿನಲ್ಲಿ ಆಸೆ ಅಂಕುರವಾಯಿತು. ಆಕೆಯನ್ನು ತನ್ನ ವಶಪಡಿಸಿಕೊಳ್ಳಲು ಪ್ರಯತ್ನಿಸಿದನು. ಚಂದನೆಯು ಒಪ್ಪದಿದ್ದಾಗ ಆಕೆಯೊಂದಿಗೆ ಕ್ರೂರವಾಗಿ ವರ್ತಿಸಲು ಪ್ರಾರಂಭಿಸಿದನು. ಚಂದನೆಯು ಇದರಿಂದ ಸ್ವಲ್ಪವೂ ಬೆದರದೆ ಶೀಲವನ್ನೇ ರಕ್ಷೆಯಾಗಿಸಿಕೊಂಡಳು. ಚಂದನೆಯು ಆ ಬೇಡನಿಗೆ ಧರ್ಮದ ಬಗ್ಗೆ ಬೋಧನೆಯನ್ನು ಮಾಡಿ ಸನ್ಮಾರ್ಗದಲ್ಲಿ ನಡೆಯುವಂತೆ ತಿಳಿಸಿದಳು. ಅಷ್ಟೇ ಅಲ್ಲ ಅಹಿಂಸೆಯ ಬಗ್ಗೆ ಬೋಧಿಸಿ ಇನ್ನು

ಮುಂದೆ ಪ್ರಾಣಿಗಳನ್ನು ಬೇಟೆಯಾಡಬಾರದು ಎಂದು ಹೇಳಿ ತನ್ನ ಬೆಲೆ ಬಾಳುವ ಚಿನ್ನದ ಆಭರಣಗಳನ್ನು ಅವನಿಗೆ ಅರ್ಪಿಸಿದಳು. ಬೇಡನು ಆಕೆಯ ವರ್ತನೆ ಹಾಗೂ ಮೃದು ಮಧುರ ನುಡಿಯಿಂದ ಪ್ರಭಾವಿತನಾದನು. ಚಂದನೆ ನೀಡಿದ ಆಭರಣಗಳನ್ನು ಕಂಡು ಸಂತೋಷಭರಿತನಾದನು. ಈತನ ಮನ ಪರಿವರ್ತನೆಯಾಗಿ ತನ್ನ ವರ್ತನೆಗೆ ನಾಚಿ ಮನದಲ್ಲೇ ಪಶ್ಚಾತ್ತಾಪಪಟ್ಟನು. ಆತನಿಗೆ ಆಕೆಯ ಮೇಲಿದ್ದ ವ್ಯಾಮೋಹ ದೂರವಾಗಿ ಗೌರವ ಭಾವನೆ ಮೂಡಿತು. ಆತನು ತಾನು ಇನ್ನು ಮುಂದೆ ಬೇಟೆಯಾಡುವುದಿಲ್ಲವೆಂದೂ ಅಹಿಂಸಾ ವ್ರತವನ್ನು ಪಾಲಿಸುವುದಾಗಿ ಚಂದನೆಗೆ ವಚನವಿತ್ತನು.

ಆತನು ಚಂದನೆಯನ್ನು ತಂದು ಬೇಡರ ನಾಯಕನಾದ ಸಿಂಹ ಎಂಬುವನಿಗೆ ಒಪ್ಪಿಸಿದನು. ಚಂದನೆಯ ಸ್ಥಿತಿ ಇಲ್ಲಿ ಇನ್ನೂ ಚಿಂತಾಜನಕವಾಯಿತು. ಆ ಬೇಡರ ನಾಯಕನು ಬಹಳ ಕ್ರೂರಿಯಾಗಿದ್ದು, ಆತನ ವರ್ತನೆ ರಾಕ್ಷಸನಂತಿತ್ತು. ಆ ನಾಯಕನು ಚಂದನೆಯ ರೂಪುಲಾವಣ್ಯವನ್ನು ಕಂಡು ಹುಚ್ಚನಂತಾದನು. ತನ್ನನ್ನು ವರಿಸುವಂತೆ ಚಂದನೆಯನ್ನು ಪರಿಪರಿಯಾಗಿ ಬೇಡಿಕೊಂಡನು. ಚಂದನೆಯು ಆತನ ಬೇಡಿಕೆಯನ್ನು ತಿರಸ್ಕರಿಸಿದಳು. ಬೇಡ ನಾಯಕನು ಆಕೆಗೆ ನಾನಾ ರೀತಿಯ ಆಸೆ ಆಮಿಷಗಳನ್ನು ಒಡ್ಡಿ ತನ್ನವಳಾಗುವಂತೆ ಕಾಡಿದನು. ಆಗಲೂ ಆಕೆ ಒಪ್ಪದಿದ್ದಾಗ ಆಕೆಯನ್ನು ಹೆದರಿಸಿ, ಬೆದರಿಸಿ ನೋಡಿದನು. ಆದರೆ ಚಂದನೆ ಮಾತ್ರ ಸ್ವಲ್ಪವೂ ವಿಚಲಿತಳಾಗಲಿಲ್ಲ. ಆಕೆಯ ಸ್ಥಿತಿ ಮಂಗನ ಕೈಗೆ ಸಿಕ್ಕ ಮಾಣಿಕ್ಯದಂತಾಯಿತು. ಆತನ ನುಡಿಗಳನ್ನು ಕೇಳಲಾರದವಳಾದಳು. ಆತನ ಕ್ರೂರ ವರ್ತನೆಯನ್ನು ಸಹಿಸಲಾರದವಳಾದಳು. ತನ್ನ ಪರಿಸ್ಥಿತಿಯನ್ನು ಕುರಿತು ''ಅಯ್ಯೋ ವಿಧಿಯೇ ನನಗೆ ಯಾವ ಪಾಪ ಕರ್ಮಕ್ಕಾಗಿ ಇಂಥ ಶಿಕ್ಷೆ'' ಎಂದು ಮರುಗಿದಳು.

ಬೇಡರ ನಾಯಕನ ತಾಯಿಯು ದಿನವೂ ತನ್ನ ಮಗ ಚಂದನೆಯನ್ನು ಕಾಡಿಸಿ ಪೀಡಿಸುತ್ತಿರುವುದನ್ನು ನೋಡುತ್ತಿದ್ದಳು. ಆಕೆ ಮೃದು ಹಾಗೂ ಧಾರ್ಮಿಕ ಸ್ವಭಾವದವಳು. ಆಕೆಗೆ ಚಂದನೆಯ ಸ್ಥಿತಿಯನ್ನು ಕಂಡು ಮರುಕ ಉಂಟಾಯಿತು. ಚಂದನೆಯ ನಡೆನುಡಿ ಕಂಡು ಆಕೆಯ ಮೇಲೆ ಪುತ್ರಿ ವಾತ್ಸಲ್ಯ ಉಕ್ಕಿತು. ಚಂದನೆಯ ಕಷ್ಟಗಳನ್ನು ನಿವಾರಿಸಬೇಕೆನಿಸಿತು. ತನ್ನ ಮಗನನ್ನು ಕರೆದು ನಾನಾ ಪ್ರಕಾರವಾಗಿ ಬುದ್ಧಿವಾದ ಹೇಳಿ, ಚಂದನೆಯ ಬಳಿ ಆತನು ವರ್ತಿಸುತ್ತಿರುವ ರೀತಿ

ಸರಿಯಲ್ಲವೆಂದಳು. ಮಗನನ್ನು ಕುರಿತು ''ವತ್ಸ, ಈಕೆಯು ಮಹಾಸಾಧ್ವಿ, ವನದೇವತೆಗೆ ಸಮಾನಳು. ಪೂಜೆಗೆ ಯೋಗ್ಯಳಾದವಳು. ಈಕೆಯ ಮೇಲಿರುವ ದುರ್ಭಾವನೆಯನ್ನು ತೊಡೆದು ಹಾಕಿ ಪೂಜ್ಯ ಭಾವನೆಯಿಂದ ಕಾಣು. ಈಕೆಗೆ ನಮಸ್ಕರಿಸು. ಇದರಿಂದ ನಿನಗೆ ಶ್ರೇಯಸ್ಸು'' ಎಂದಳು.

ಈಗಾಗಲೇ ಚಂದನೆಯ ಸಾತ್ವಿಕ ಸ್ವಭಾವ ನಾಯಕನ ಮೇಲೆ ಸಾಕಷ್ಟು ಪ್ರಭಾವ ಬೀರಿತ್ತು. ಚಂದನೆಯೊಂದಿಗೆ ತಾನು ಕೆಟ್ಟದಾಗಿ ವರ್ತಿಸಬಾರದಿತ್ತು ಎಂದುಕೊಂಡನು. ತಾಯಿಯ ಹಿತವಚನ ಆತನ ಅಂತರಾಳವನ್ನು ತಟ್ಟಿ ಮನಸ್ಸು ಪರಿವರ್ತನೆಯಾಯಿತು. ತನ್ನ ವರ್ತನೆಗೆ ತಾನೇ ನಾಚಿ ಚಂದನೆಯ ಬಳಿ ಸಾರಿ ಕ್ಷಮೆಯಾಚಿಸಿ ತಲೆಬಾಗಿ ನಮಸ್ಕರಿಸಿದನು. ತಾಯಿ ತನ್ನ ಮಗುವಿನ ತಪ್ಪನ್ನು ಕ್ಷಮಿಸುಂತೆ ಚಂದನೆ ಆತನ ತಪ್ಪನ್ನು ಕ್ಷಮಿಸಿದಳು. ತನ್ನೆಲ್ಲಾ ಅಪರಾಧಗಳನ್ನು ಕ್ಷಮಿಸಿದ ಚಂದನೆ ಬೇಡರನಾಯಕನಿಗೆ ಸಾಕ್ಷಾತ್ ದೇವತೆಯಂತೆ ಕಂಡಳು.

ನಾಯಕನ ತಾಯಿಯು ಚಂದನೆಗೆ ಪ್ರತ್ಯೇಕ ಮಂದಿರದ ವ್ಯವಸ್ಥೆ ಮಾಡುವಂತೆ ಆದೇಶವಿತ್ತಳು. ಅಂತೆಯೇ ಬೇಡನಾಯಕನು ಚಂದನೆಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಿ ಆಕೆಯ ಪೂಜೆಪುನಸ್ಕಾರಗಳಿಗೆ ಅನುಕೂಲ ಮಾಡಿಕೊಟ್ಟನು. ಇದರಿಂದ ಚಂದನೆಯ ದುಗುಡವೆಲ್ಲಾ ದೂರವಾಯಿತು. ಚಂದನೆಯು ಮಂದಿರದಲ್ಲಿ ಜಿನನ ಆರಾಧನೆ ಮಾಡುತ್ತಾ ಕಾಲ ಕಳೆಯುತ್ತಿದ್ದಳು. ಆಕೆ ಉತ್ತಮ ಕ್ಷಮಾ, ಉತ್ತಮ ಸಂಯಮ ಇತ್ಯಾದಿ ಗುಣಗಳ ಮಹತ್ವವನ್ನು ಗುರುಗಳಿಂದ ಕೇಳಿ ತಿಳಿದಿದ್ದಳು. ಇಂದು ಅವುಗಳನ್ನೇ ತನ್ನ ಅಸ್ತ್ರಗಳನ್ನಾಗಿಸಿ ಕೊಂಡಳು. ಭಗವದ್ ಚಿಂತನೆ ಮಾಡುತ್ತಾ ಅನ್ಯ ಯೋಚನೆಗಳನ್ನು ತೊರೆದು ಸದಾ ಸ್ವಾಧ್ಯಾಯವನ್ನು ಮಾಡುತ್ತಿದ್ದಳು. ಇಂಥ ಸಾಧ್ವಿಯನ್ನು ಭಗವದ್ ಭಕ್ತೆಯನ್ನು ಯಾರು ತಾನೇ ಏನು ಮಾಡಲು ಸಾಧ್ಯ? ಅವಳ ವರ್ತನೆ ಅಲ್ಲಿಯ ಜನರ ಮೇಲೆ ಪ್ರಭಾವ ಬೀರಿತು. ಆಕೆಯನ್ನು ಅಲ್ಲಿಯ ಜನರು ಭಕ್ತಿ ಗೌರವ ಭಾವನೆಗಳಿಂದ ಕಾಣಲಾರಂಭಿಸಿದರು. ಆಕೆ ಜಿನನ ಪೂಜೆ ಮಾಡುವಾಗ ಸುತ್ತಮುತ್ತಲಿನ ಜನ ಬಂದು ತಾವೂ ಆ ಪೂಜೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಚಂದನೆಯು ಅವರಿಗೆ ಧರ್ಮೋಪದೇಶ ಮಾಡುತ್ತಿದ್ದಳು. ಅವರಿಗೆ ಸತ್ಯ, ಅಹಿಂಸೆ, ಅಸ್ತೇಯ, ಅಪರಿಗ್ರಹ ಮತ್ತು ಬ್ರಹ್ಮಚರ್ಯದ ಮಹತ್ವವನ್ನು ತಿಳಿಸುತ್ತಿದ್ದಳು. ಆಕೆಯ ಬೋಧನೆಯು ಅಲ್ಲಿಯ ಜನರಿಗೆ ಮೆಚ್ಚುಗೆಯಾಯಿತು.

ಬೇಡರ ನಾಯಕನಂತೂ ತನ್ನ ಕ್ರೂರ ಸ್ವಭಾವವನ್ನು ಬಿಟ್ಟು ಸನ್ಮಾರ್ಗಿಯಾದನು. ಆತನ ಪರಿವರ್ತನೆ ಕಂಡು ಆತನ ತಾಯಿಗಂತೂ ಅಪರಿಮಿತ ಆನಂದವಾಯಿತು. ತನ್ನ ಮಗನನ್ನು ಹಾಗೂ ಅಲ್ಲಿಯ ಜನರನ್ನೂ ಪರಿವರ್ತಿಸಿದ ಚಂದನೆಯ ಹಿರಿಮೆಯನ್ನು ಆಕೆ ಬಾಯಿತುಂಬಾ ಕೊಂಡಾಡಿದಳು. ಆಕೆಯು ಚಂದನೆಯನ್ನು ದೈವೀಸ್ವರೂಪಳೆಂದೇ ಭಾವಿಸಿದಳು.

ಕಾಲವು ಎಂದಾದರೂ ನಿಲ್ಲುವುದೇ ? ದಿನದ ಮೇಲೆ ದಿನಗಳು ಉರುಳುತ್ತಿದ್ದವು. ಬೇಡನಾಯಕನಿಗೆ ಮಿತ್ರ ವೀರನೆಂಬ ಸ್ನೇಹಿತನಿದ್ದನು. ಆತನು ಇದ್ದಕ್ಕಿದ್ದಂತೆ ಬೇಡನಾಯಕನನ್ನು ನೋಡಲು ಬಂದನು . ಬೇಡನಾಯಕನು ಆತನನ್ನು ಆತ್ಮೀಯವಾಗಿ ಸ್ವಾಗತಿಸಿದನು. ಬೇಡನಾಯಕನ ನಡೆನುಡಿಯಲ್ಲಿನ ಬದಲಾವಣೆ ಕಂಡು ಆಶ್ಚರ್ಯವಾಯಿತು. ಆತನು ನಾಯಕನನ್ನು ಕುರಿತು ನಿನ್ನಲ್ಲಿ ಈ ಬದಲಾವಣೆ ಹೇಗೆಂದು ಪ್ರಶ್ನಿಸಿದನು. ನಾಯಕನು ತನ್ನ ಪರಿವರ್ತನೆಗೆ ಕಾರಣವಾದ ಚಂದನೆಯ ಬಗ್ಗೆ ವಿವರಿಸಿದನು. ಮಿತ್ರವೀರನಿಗೂ ಮಹಾ ಸಾಧ್ವಿಯಾದ ಚಂದನೆಯನ್ನು ನೋಡಬೇಕೆನಿಸಿತು. ಆತನು ತನ್ನ ಮನದ ಅಭಿಲಾಷೆಯನ್ನು ಸ್ನೇಹಿತನಿಗೆ ತಿಳಿಸಲು ನಾಯಕನು ಆತನನ್ನು ಚಂದನೆಯಿದ್ದ ಮಂದಿರಕ್ಕೆ ಕರೆ ತಂದನು. ಮಿತ್ರವೀರನಿಗೆ ಚಂದನೆಯನ್ನು ಕಂಡೊಡನೆ ಮನದಲ್ಲಿ ಭಕ್ತಿಭಾವ ಉಂಟಾಯಿತು. ಆಕೆಗೆ ಭಕ್ತಿಯಿಂದ ವಂದಿಸಿದನು. ನಾಯಕನು ಚಂದನೆಯನ್ನು ಮಿತ್ರವೀರನಿಗೆ ಒಪ್ಪಿಸಿದನು.

ಆಕೆಯನ್ನು ಮಿತ್ರವೀರನು ಗೌರವಾದರಗಳಿಂದ ತನ್ನ ಮನೆಗೆ ಕರೆತಂದನು. ಮನೆಯವರಿಗೆ ಆಕೆಯ ಮಹಿಮೆಯ ಬಗ್ಗೆ ತಿಳಿಸಿದನು. ಮನೆಮಂದಿಯೆಲ್ಲಾ ಚಂದನೆಯನ್ನು ಕಂಡು ಸಂತೋಷಗೊಂಡರು. ಆಕೆಯನ್ನು ಸುತ್ತುವರಿದು ಆಕೆಯಿಂದ ಧಾರ್ಮಿಕ ವಿಚಾರಗಳನ್ನು ಕೇಳಿ ತಿಳಿದುಕೊಂಡರು. ಚಂದನೆಯು ಅವರೊಂದಿಗೆ ಸ್ನೇಹದಿಂದ ಒಂದಾಗಿ ಬೆರೆತು ಅವರಿಗೆಲ್ಲಾ ಪ್ರಿಯಳಾದಳು. ಮಿತ್ರ ವೀರನಿಗೆ ವೃಷಭ ಶ್ರೇಷ್ಠಿ ಎಂಬ ಯಜಮಾನನಿದ್ದನು. ಆತನು ಮೃದು ಹಾಗೂ ಧಾರ್ಮಿಕ ಸ್ವಭಾವದವನು. ಮಿತ್ರವೀರನಿಗೆ ತನ್ನ ಯಜಮಾನನನ್ನು ಕಂಡರೆ ಪ್ರೀತಿ ಹಾಗೂ ಗೌರವ. ವೃಷಭ ಶ್ರೇಷ್ಠಿಯು ಚಂದನೆಗೆ ಯೋಗ್ಯವಾದ ಆಶ್ರಯನೀಡಬಲ್ಲ ಎಂದುಕೊಂಡು ಮನೆಯವರಿಗೆಲ್ಲಾ ಈ ವಿಷಯ ತಿಳಿಸಿದನು. ಅವರಿಗೆಲ್ಲಾ ಚಂದನೆಯನ್ನು ಕಳುಹಿಸುವುದು

ಇಷ್ಟವಿರಲಿಲ್ಲ. ಆದರೆ ಚಂದನೆಯ ಹಿತದೃಷ್ಟಿಯಿಂದ ಒಪ್ಪಿಕೊಂಡರು. ಮಿತ್ರವೀರನು ಚಂದನೆಯನ್ನು ವೃಷಭ ಶ್ರೇಷ್ಠಿಗೆ ಒಪ್ಪಿಸಿದನು.

ಮೃದು ಹೃದಯಿಯಾದ ವೃಷಭಶ್ರೇಷ್ಠಿಯು ಚಂದನೆಯ ಸ್ಥಿತಿಯನ್ನು ಕಂಡು ಮರುಗಿದನು. ಆಕೆಯ ಬಗ್ಗೆ ಮಿತ್ರನಿಂದ ಕೇಳಿ ತಿಳಿದುಕೊಂಡಿದ್ದನು. ಆತನಿಗೆ ಆಕೆಯ ಮೇಲೆ ಗೌರವ ಹಾಗೂ ವಾತ್ಸಲ್ಯ ಭಾವಗಳು ಮೂಡಿದವು. ಆತನು ಚಂದನೆಯೊಂದಿಗೆ ವಿನೀತನಾಗಿ ವರ್ತಿಸಿದನು. ಆಕೆಯ ಬಗ್ಗೆ ಪಿತೃ ಸಮಾನವಾದ ವಾತ್ಸಲ್ಯ ತೋರಿದನು. ಪ್ರೀತಿಯ ನುಡಿಗಳಿಂದ ಆಕೆಗೆ ಧೈರ್ಯ ಹೇಳಿದನು. ಆಕೆಯ ಪೂರ್ವ ವೃತ್ತಾಂತ ಸಂಪೂರ್ಣ ಗೊತ್ತಿಲ್ಲದ ಕಾರಣ ಆಕೆಯ ತಂದೆತಾಯಿಯರ ಬಗ್ಗೆ ವಿಚಾರಿಸಿದನು. ಆದರೆ ಚಂದನೆ ಏನೊಂದೂ ನುಡಿಯದೆ ಮೌನಿಯಾಗಿದ್ದಳು. ಆಕೆಯು ತನ್ನ ತಂದೆತಾಯಿಯರ ಬಗ್ಗೆಯಾಗಲಿ, ತನಗೊದಗಿದ ಹೀನಸ್ಥಿತಿಯ ಬಗೆಗಾಗಲಿ ಏನೂ ಹೇಳಲಿಲ್ಲ. ವೃಷಭಶ್ರೇಷ್ಠಿ ಸೂಕ್ಷ್ಮ ಮನಸ್ಸಿನವನಾದ್ದರಿಂದ ಹೆಚ್ಚು ಬಲವಂತ ಮಾಡದೆ ಸಮಯ ಬಂದರೆ ಆಕೆಯೇ ಎಲ್ಲವನ್ನೂ ಹೇಳುತ್ತಾಳೆ ಎಂದುಕೊಂಡು ಮೌನವಹಿಸಿದನು.

ಶ್ರೇಷ್ಠಿಯು ಗೌರವಾದರಗಳಿಂದ ಚಂದನೆಯನ್ನು ತನ್ನ ಮನೆಗೆ ಕರೆತಂದನು. ಪತ್ನಿಯನ್ನು ಕರೆದು ''ಈಕೆ ಸಾಧ್ವಿ ಹಾಗೂ ಸೂಕ್ಷ್ಮ ಮನಸ್ಸಿನ ಹೆಣ್ಣು. ಇನ್ನು ಮುಂದೆ ನಮ್ಮ ಮನೆಯಲ್ಲಿಯೇ ಇರುತ್ತಾಳೆ. ನೀನು ಈಕೆಯನ್ನು ಮಗಳಂತೆ ನೋಡಿಕೊಳ್ಳಬೇಕು'' ಎಂದು ಆದೇಶವಿತ್ತನು. ಚಂದನೆಯ ಅಪೂರ್ವ ಸೌಂದರ್ಯವನ್ನು ಕಂಡು ಶ್ರೇಷ್ಠಿಯ ಪತ್ನಿಗೆ ಕಸಿವಿಸಿಯಾಯಿತು. ಚಂದದ ಚಂದನೆಯನ್ನು ತನ್ನ ಮನೆಯಲ್ಲಿ ಇಟ್ಟುಕೊಳ್ಳುವುದು ಆಕೆಗೆ ಇಷ್ಟವಿರಲಿಲ್ಲ. ಆದರೆ ಪತಿಗೆ ಹೆದರಿ ಆಕೆಯನ್ನು ಮನೆಯಲ್ಲಿ ಇಟ್ಟುಕೊಂಡಳು. ಗಂಡನ ಎದುರಿಗೆ ಮಾತ್ರ ಚಂದನೆಯನ್ನು ಪ್ರೀತಿಸುವಂತೆ ನಟಿಸುತ್ತ ಒಳಗೊಳಗೇ ಚಂದನೆಯ ಮೇಲೆ ದ್ವೇಷ ಸಾಧಿಸುತ್ತಿದ್ದಳು.

ಚಂದನೆ ಮಾತ್ರ ಇದ್ಯಾವುದನ್ನೂ ಗಮನಿಸದೆ ತನ್ನ ಪಾಡಿಗೆ ತಾನು ವ್ರತನಿಯಮಗಳನ್ನು ಪಾಲಿಸುತ್ತ ಜಿನನ ಪೂಜೆ ಮಾಡುತ್ತಾ ಸ್ವಾಧ್ಯಾಯ ನಡೆಸುತ್ತಾ ದಿನ ಕಳೆಯುತ್ತಿದ್ದಳು. ತನ್ನಿಂದ ಯಾರಿಗೂ ಯಾವ ತೊಂದರೆಯೂ ಆಗದಂತೆ ಎಚ್ಚರಿಕೆಯಿಂದಿದ್ದಳು. ಮನೆಯ ಆಳುಕಾಳುಗಳೊಂದಿಗೆ ಸ್ನೇಹದಿಂದ

ವರ್ತಿಸುತ್ತಿದ್ದಳು. ಅವಳ ನಿಷ್ಕಲ್ಮಶ ಸ್ನೇಹ ಆಳುಕಾಳುಗಳಿಗೆ ಸಂತಸ ತಂದಿತು. ಅವರೆಲ್ಲರಿಗೂ ಆಕೆಯನ್ನು ಕಂಡರೆ ಅಚ್ಚುಮೆಚ್ಚು. ಎಲ್ಲರೂ ಆಕೆಯ ಬಗ್ಗೆ ತೋರಿಸುತ್ತಿದ್ದ ಪ್ರೀತಿ ಗೌರವ ಕಂಡು ಶ್ರೇಷ್ಠಿಯ ಹೆಂಡತಿಯ ಸ್ಥಿತಿ ಉರಿಯುವ ಬೆಂಕಿಗೆ ತುಪ್ಪ ಸುರಿದಂತಾಯಿತು. ಚಂದನೆಯ ಬಗೆಗಿದ್ದ ಅವಳ ದ್ವೇಷದ ಜ್ವಾಲೆ ದಿನದಿಂದ ದಿನಕ್ಕೆ ಹೆಚ್ಚುತ್ತಿತ್ತು. ಚಂದನೆಯು ಆಕೆಯೊಂದಿಗೆ ಎಷ್ಟೇ ಸ್ನೇಹದಿಂದ ವರ್ತಿಸಿದರೂ ತಾನು ಮಾತ್ರ ಆಕೆಯ ಮೇಲೆ ಕಿಡಿ ಕಾರುತ್ತಿದ್ದಳು. ಚಂದನೆಯು ದಿನವೂ ಸಂಜೆ ಮನೆಯ ಮಕ್ಕಳನ್ನು ಆಳುಕಾಳುಗಳನ್ನೂ ಕೂರಿಸಿಕೊಂಡು ಪುರಾಣ ಓದಿ ಹೇಳುತ್ತಿದ್ದಳು. ಅಹಿಂಸೆಯ ಮಹಿಮೆ, ಆಹಾರದಾನದ ಮಹಿಮೆ ಇತ್ಯಾದಿಗಳ ಬಗ್ಗೆ ತಿಳಿಸಿ ಹೇಳುತ್ತಿದ್ದಳು. ದಿನಗಳೆದಂತೆ ಮನೆಮಂದಿಗೆಲ್ಲಾ ಚಂದನೆಯ ಸಹವಾಸ ಅತಿ ಪ್ರಿಯವೆನಿಸತೊಡಗಿತು. ಶ್ರೇಷ್ಠಿಯೂ ಕೂಡ ದಿನವೂ ಬೆಳಿಗ್ಗೆ ಮತ್ತು ಸಂಜೆ ಚಂದನೆಯನ್ನು ಪ್ರೀತಿಯಿಂದ ವಿಚಾರಿಸಿಕೊಳ್ಳುತ್ತಿದ್ದ. ಅವಳ ಬೇಕು ಬೇಡಗಳ ಬಗ್ಗೆ ಗಮನ ಕೊಡುತ್ತಿದ್ದನು. ಅವಳ ಪೂಜಾಕಾರ್ಯಗಳಿಗೆ ಬೇಕಾದ ವ್ಯವಸ್ಥೆ ಮಾಡಕೊಡುತ್ತಿದ್ದನು. ಸಮಯ ಸಿಕ್ಕಾಗಲೆಲ್ಲಾ ತಾನೂ ಆಕೆಯ ಪೂಜಾಕಾರ್ಯದಲ್ಲಿ ಭಾಗಿಯಾಗುತ್ತಿದ್ದನು. ಇದನ್ನು ಕಂಡ ಶ್ರೇಷ್ಠಿಯ ಪತ್ನಿಯು ಚಂದನೆ ತನ್ನ ಯೌವ್ವನ ಮತ್ತು ಸೌಂದರ್ಯದಿಂದ ತನ್ನ ಗಂಡನನ್ನು ಆಕರ್ಷಿಸುತ್ತಿದ್ದಾಳೆ ಎಂದುಕೊಂಡಳು. ದಿನದಿನಕ್ಕೆ ಆಕೆಗೆ ಚಂದನೆ ಹಾಗೂ ಪತಿಯ ಬಗ್ಗೆ ಸಂಶಯ ಹೆಚ್ಚಾಯಿತು. ತನ್ನ ಪತಿ ಆಕೆಯ ಬಗ್ಗೆ ತೋರಿಸುತ್ತಿದ್ದ ಪ್ರೀತಿ ವಾತ್ಸಲ್ಯಗಳು ಆಕೆಯ ಸಂಶಯಕ್ಕೆ ಮತ್ತಷ್ಟು ಪೂರಕವಾದವು. ಮೇಲು ನೋಟಕ್ಕೆ ಮಾತ್ರ ಇವರು ತಂದೆ ಮಗಳಂತೆ ವರ್ತಿಸುತ್ತಿದ್ದಾರೆ. ಆದರೆ ಇವರ ಅಂತರಂಗವೇ ಬೇರೆ ಎಂದು ಭಾವಿಸಿದಳು. ಆಕೆಯ ಕಣ್ಣಿಗೆ ಚಂದನೆ ತನ್ನ ಬಾಳಿನ ಧೂಮಕೇತುವೆಂಬಂತೆ ಕಂಡಳು. ಅವಳು ಪ್ರತಿಕ್ಷಣ ತನ್ನ ಪತಿ ಮತ್ತು ಚಂದನೆಯ ವರ್ತನೆಯನ್ನು ಸಂಶಯದ ದೃಷ್ಟಿಯಿಂದಲೇ ನೋಡುತ್ತಿದ್ದಳು. ಆಕೆಯ ಮನದ ತುಂಬಾ ಅಶಾಂತಿ ಅಸೂಯೆ ಮತ್ತು ಸಂಶಯಗಳೇ ತುಂಬಿದ್ದವು.

ದಿನಗಳು ಉರುಳುತ್ತಿದ್ದವು. ಒಂದು ಕಡು ಬೇಸಿಗೆಯದಿನ ಬಿರು ಬಿಸಿಲಿನಲ್ಲಿ ಶ್ರೇಷ್ಠಿಯು ವ್ಯಾಪಾರ ಮುಗಿಸಿ ಮನೆಗೆ ಬಂದನು. ತಕ್ಷಣವೇ ಚಂದನೆ ನೀರು ತಂದು ಶ್ರೇಷ್ಠಿಯ ಕೈಗೆ ನೀರೆರೆಯುತ್ತಿದ್ದಳು. ಆಗ ಚಂದನೆಯ ಜಡೆ ಬಿಚ್ಚಿ ಆಕೆಯ ನೀಳಕೂದಲು ನೆಲವನ್ನು ತಾಗತೊಡಗಿತು. ಶ್ರೇಷ್ಠಿಯು

ಇದನ್ನು ಕಂಡು ಆಕೆಯ ಕೂದಲನ್ನು ತನ್ನ ಕೈಯಿಂದ ಎತ್ತಿಹಿಡಿದನು. ಆಗ ಶ್ರೇಷ್ಠಿಯ ಹೆಂಡತಿ ಉಪ್ಪರಿಗೆಯ ಮೇಲಿಂದ ಈ ದೃಶ್ಯವನ್ನು ನೋಡಿದಳು. ಮೊದಲೇ ಸಂಶಯ ಮನದವಳಾದ ಆಕೆ ಈ ದೃಶ್ಯ ಕಂಡು ಜ್ವಾಲಾಮುಖಿ ಯಾದಳು. ಆಕೆ ತನ್ನ ಪತಿ ಹಾಗೂ ಚಂದನೆಯ ಬಗ್ಗೆ ತಪ್ಪಾಗಿ ಭಾವಿಸಿದಳು. ಆಕೆಯ ಮೈಮನ ರೋಷದಿಂದ ಕುದಿಯಿತು. ಆಕೆಯ ಮನಸ್ಸಿನಲ್ಲಿ ಚಂದನೆಯನ್ನು ಕುರಿತು ''ಈಕೆಯು ಬಲು ಸುಂದರವಾದ ಹೆಣ್ಣು. ಇವಳು ನನ್ನ ಗಂಡನನ್ನು ಮರುಳುಗೊಳಿಸಿದ್ದಾಳೆ. ನನ್ನ ಗಂಡ ಈಕೆಯ ಬಲೆಯಲ್ಲಿ ಬಿದ್ದಿದ್ದಾನೆ. ಈಕೆಯು ನನ್ನ ಸಂಸಾರಕ್ಕೆ ಮುಳ್ಳಾಗಿದ್ದಾಳೆ'' ಎಂದೆಲ್ಲಾ ಭಾವಿಸತೊಡಗಿದಳು. ತಂದೆ ಮಗಳಂತಿದ್ದ ಅವರ ನಿರ್ಮಲ ಪ್ರೀತಿ ಈಕೆಗೆ ಅರ್ಥವೇ ಆಗಲಿಲ್ಲ.

ಕಾಮಾಲೆಯವರ ಕಣ್ಣಿಗೆ ಕಾಣುವುದೆಲ್ಲಾ ಹಳದಿ ಎಂಬಂತೆ ಈಕೆಗೆ ಚಂದನೆಯ ವರ್ತನೆಯೆಲ್ಲಾ ತಪ್ಪಾಗೇ ಕಾಣುತ್ತಿತ್ತು. ಚಂದನೆಯ ಸದ್ಗುಣಗಳೊಂದೂ ಆಕೆಯ ಮನಸ್ಸಿನಲ್ಲಿ ಉಳಿಯಲಿಲ್ಲ. ಚಂದನೆಯನ್ನು ಪರಿಪರಿಯಾಗಿ ನಿಂದಿಸತೊಡಗಿದಳು. ದ್ವೇಷ ಹೆಚ್ಚಾಗಿ ಆಕೆಯ ಮೇಲೆ ಸೇಡು ತೀರಿಸಿಕೊಳ್ಳಲು ನಿಶ್ಚಯಿಸಿಕೊಂಡಳು. ಚಂದನೆಯನ್ನು ಯಾವ ರೀತಿ ಶಿಕ್ಷಿಸಬೇಕು, ಎಂಥೆಂಥಾ ಹಿಂಸೆ ಕೊಡಬೇಕು, ಯಾವ ರೀತಿ ಮನೆಯಿಂದ ಹೊರಗಟ್ಟಬೇಕು , ಎಂದು ಮನದಲ್ಲೇ ದೊಡ್ಡಯೋಜನೆ ಹಾಕಿಕೊಂಡಳು. ಶ್ರೇಷ್ಠಿಯ ಎದುರಿಗೆ ಶಿಕ್ಷಿಸುವ ಧೈರ್ಯ ಆಕೆಗಿರಲಿಲ್ಲ. ಆತನಿಗೆ ಗೊತ್ತಾಗುವಂತೆ ಚಂದನೆಗೆ ತಾನೇನಾದರೂ ತೊಂದರೆ ಕೊಟ್ಟರೆ ತನಗೆ ಉಳಿಗಾಲವಿಲ್ಲವೆಂದು ಆಕೆಗೆ ಗೊತ್ತಿತ್ತು. ಅದಕ್ಕಾಗಿ ತನ್ನ ಗಂಡನೆದುರು ಚಂದನೆಯ ಮೇಲೆ ಪ್ರೀತಿಯ ಮಳೆ ಹರಿಸುತ್ತಿದ್ದಳು. ಆಕೆಯ ಪತಿಗೆ ಆಕೆಯ ಅಂತರಂಗ ಗೊತ್ತಾಗಲಿಲ್ಲ. ಆತನು ತನ್ನ ಪತ್ನಿ ಚಂದನೆಯನ್ನು ಮಗಳಂತೆ ನೋಡಿಕೊಳ್ಳುತ್ತಿದ್ದಾಳೆ ಎಂದೇ ತಿಳಿದಿದ್ದನು. ಆದರೆ ಶ್ರೇಷ್ಠಿಯ ಪತ್ನಿ ಚಂದನೆಯ ಮೇಲೆ ಸೇಡು ತೀರಿಸಿಕೊಳ್ಳಲು ಸಮಯ ಕಾಯುತ್ತಿದ್ದಳು.

ಆಕೆ ಕಾತುರದಿಂದ ನಿರೀಕ್ಷಿಸುತ್ತಿದ್ದ ಸಮಯ ಬಂದೇ ಬಿಟ್ಟಿತು. ಒಮ್ಮೆ ಶ್ರೇಷ್ಠಿಯು ವ್ಯಾಪಾರ ನಿಮಿತ್ತ ನಗರದಿಂದ ಹೊರಕ್ಕೆ ಹೋದನು. ಈ ಅವಕಾಶಕ್ಕಾಗಿಯೇ ಚಾತಕ ಪಕ್ಷಿಯಂತೆ ಕಾಯುತ್ತಿದ್ದ ಶ್ರೇಷ್ಠಿಯ ಪತ್ನಿ

ಚಂದನೆಯನ್ನು ಬಗೆಬಗೆಯಾಗಿ ನಿಂದಿಸತೊಡಗಿದಳು. ಪೂರ್ವ ಜನ್ಮದ ಪಾಪದ ಫಲದಿಂದಾಗಿ ಚಂದನೆಯು ಹಲವು ರೀತಿಯ ಕಷ್ಟ ಕೋಟಲೆಗಳಿಗೆ ಸಿಲುಕಿದಳು. ಶ್ರೇಷ್ಠಿಯ ಹೆಂಡತಿ ಚಂದನೆಗೆ ಕಠೋರವಾದ ಶಿಕ್ಷೆಯನ್ನು ಕೊಟ್ಟಳು. ಚಂದನೆಯ ಮೃದವಾದ ಕಾಲು ಮತ್ತು ಕೈಗಳಿಗೆ ಕಬ್ಬಿಣದ ಸರಪಳಿಯನ್ನು ಬಿಗಿದಳು. ಕೆಟ್ಟ ಶಬ್ದಗಳಿಂದ ಆಕೆಯನ್ನು ಬೈಯುತ್ತಾ ಮೈಮೇಲೆ ಬಾಸುಂಡೆ ಬರುವಂತೆ ಬಾರಿಸಿದಳು. ಆಕೆ ಉಟ್ಟಿದ್ದ ಸೀರೆಯನ್ನು ಕಿತ್ತೆಸೆದು ಅದರ ಬದಲಿಗೆ ಒರಟಾದ ಚುಚ್ಚುವ ಕಂಬಳಿಯನ್ನು ಉಡಲು ಕೊಟ್ಟಳು. ಚಂದನೆಯ ಚಲುವಿನಲ್ಲಿ ಆಕೆಯ ನೀಳ ಕೂದಲ ಪಾತ್ರ ಪ್ರಮುಖವಾಗಿತ್ತು. ಶ್ರೇಷ್ಠಿಯ ಹೆಂಡತಿಗೆ ಚಂದನೆಯ ಸುಂದರವಾದ ನೀಳ ಕೂದಲ ಮೇಲೆ ಕಣ್ಣಿತ್ತು. ಆಕೆ ಒಬ್ಬ ಆಯುಷ್ಕರ್ಮಿಯನ್ನು ಕರೆಯಿಸಿ, ಚಂದನೆಯ ತಲೆಕೂದಲನ್ನು ಬೋಳಿಸುವಂತೆ ಆದೇಶಿಸಿದಳು. ಕೆಲಸದ ಆಳುಗಳು ಬೇಡಬೇಡವೆಂದು ತಡೆದರೂ ಕೇಳಲಿಲ್ಲ. ಚಂದನೆಯು ಕತ್ತರಿಸಿ ಬಿದ್ದ ತನ್ನ ಸುಂದರವಾದ ಕೂದಲನ್ನು ನೋಡಿ ಮೌನವಾಗಿ ಕಣ್ಣೀರು ಸುರಿಸಿದಳು. ಚಂದನೆಯನ್ನು ಎಷ್ಟು ಹಿಂಸಿಸಿದರೂ ಆಕೆಗೆ ತೃಪ್ತಿಯಾಗಲೇ ಇಲ್ಲ. ಆವಳನ್ನು ದರದರನೆ ಎಳೆದು ತಂದು ಕತ್ತಲೆ ಕೋಣೆಗೆ ನೂಕಿದಳು ಮತ್ತು ಮಣ್ಣಿನ ತಟ್ಟೆ ಕೊಟ್ಟು ತಿನ್ನಲು ಹಳಸಿದ ಅನ್ನವನ್ನು ಕೊಟ್ಟಳು. ಕೋಣೆಗೆ ಬಲವಾದ ಬೀಗ ಜಡಿದಳು. ಚಂದನೆಗೆ ಕೊಡುತ್ತಿದ್ದ ಹಿಂಸೆ ಕಂಡು ಆಳುಗಳು ಕಣ್ಣೀರು ಸುರಿಸಿದರು. ಚಂದನೆಯ ಸ್ಥಿತಿ ಕಂಡು ಮರುಗಿದರು. ತಮ್ಮ ಕ್ರೂರ ಒಡತಿಯನ್ನು ಮನಸ್ಸಿನಲ್ಲೇ ನಾನಾ ಬಗೆಯಾಗಿ ನಿಂದಿಸಿದರು. ಶ್ರೇಷ್ಠಿಯ ಹೆಂಡತಿಯು ಆಳುಗಳನ್ನು ಕರೆದು ಯಾರಾದರೂ ಈ ವಿಷಯವನ್ನು ಶ್ರೇಷ್ಠಿಗೆ ತಿಳಿಸಿದರೆ ಅಥವಾ ಯಾರ ಮುಂದಾದರೂ ಈ ವಿಷಯದ ಬಗ್ಗೆ ಬಾಯಿ ತೆಗೆದರೆ ಅವರಿಗೆ ಕಠಿಣ ಶಿಕ್ಷೆ ಕೊಡುವುದಾಗಿ ತಿಳಿಸಿದಳು ಮತ್ತು ಕೆಲಸದಿಂದ ತೆಗೆದು ಹಾಕುವುದಾಗಿ ಬೆದರಿಸಿದಳು. ಆಳುಗಳು ಆಕೆಯ ಅಬ್ಬರದ ಮಾತು ಕೇಳಿ ಬೆದರಿದ ಬೊಂಬೆಗಳಂತೆ ನಿಂತುಬಿಟ್ಟರು.

ಕೆಲವು ದಿನಗಳ ನಂತರ ಶ್ರೇಷ್ಠಿ ವ್ಯಾಪಾರದಿಂದ ಹಿಂದಿರುಗುವ ಸಮಾಚಾರ ತಿಳಿದು ಬಂದಿತು. ಶ್ರೇಷ್ಠಿಯ ಹೆಂಡತಿಗೆ ಭಯವಾಗತೊಡಗಿತು. ಗಂಡನು ಬಂದ ಕೂಡಲೆ ಖಂಡಿತ ಚಂದನೆಯ ಬಗ್ಗೆ ವಿಚಾರಿಸುತ್ತಾನೆ. ಆತನು ಚಂದನೆ ಎಲ್ಲಿ ಎಂದರೆ ಏನೆಂದು ಹೇಳುವುದು. ಅಕಸ್ಮಾತ್ ಆತನಿಗೆ ತಾನು

ಚಂದನೆಯನ್ನು ಶಿಕ್ಷಿಸಿದ ವಿಚಾರ ತಿಳಿದರೆ ಖಂಡಿತ ತನ್ನನ್ನು ದಂಡಿಸದೆ ಇರುವುದಿಲ್ಲ ಎಂದೆಲ್ಲ ಯೋಚಿಸಿ ತಕ್ಷಣ ತನ್ನ ತೌರುಮನೆಗೆ ಹೊರಟು ಹೋದಳು.

ಶ್ರೇಷ್ಠಿಯು ವ್ಯಾಪಾರ ಕಾರ್ಯ ಮುಗಿಸಿ ಮನೆಗೆ ಹಿಂದಿರುಗಿದನು. ಮನೆಯಲ್ಲಿ ಹೆಂಡತಿಯ ಸುಳಿವೇ ಇಲ್ಲ, ಜೊತೆಗೆ ಚಂದನೆಯ ಸುಳಿವೂ ಇಲ್ಲ. ಆತನಿಗೆ ಆಶ್ಚರ್ಯವಾಯಿತು. ಇಬ್ಬರೂ ಎಲ್ಲೋ ಹೊರಗೆ ಹೋಗಿರಬಹುದು, ತಿರುಗಿಬರಬಹುದು ಎಂದು ಯೋಚಿಸಿದನು. ಆದರೆ ರಾತ್ರಿಯಾದರೂ ಇಬ್ಬರ ಪತ್ತೆಯೂ ಇಲ್ಲ, ಆದರ ಮಾರನೆಯ ದಿನವೂ ಅವರ ಸುಳಿವಿಲ್ಲ. ಆತನಿಗೆ ಬಹಳ ವಿಚಿತ್ರವೆನಿಸಿತು. ತನ್ನ ಮನೆಯ ಕೆಲಸದ ಆಳುಗಳನ್ನು ವಿಚಾರಿಸಿದ. ಆಳುಗಳು ಆತನ ಪತ್ನಿ ತೌರಿಗೆ ಹೋದ ವಿಚಾರ ಮಾತ್ರ ತಿಳಿಸಿದರು. ಆತ ಚಂದನೆ ಎಲ್ಲಿ ಎಂದು ವಿಚಾರಿಸಿದಾಗ ಅವರು ತಮಗೆ ಚಂದನೆಯ ವಿಷಯ ಗೊತ್ತಿಲ್ಲವೆಂದರು. ಆದರೆ ಶ್ರೇಷ್ಠಿಗೆ ಈ ಮನೆಯಲ್ಲಿ ಏನೋ ನಡೆದಿದೆ, ಏನೋ ಅನಾಹುತವಾಗಿದೆ ಎನಿಸತೊಡಗಿತು. ಆತನ ಮನಸ್ಸು ಕಳವಳಗೊಂಡಿತು. ತನ್ನ ಸೇವಕರನ್ನು ಕರೆದು ರೋಷದಿಂದ "ಚಂದನೆ ಎಲ್ಲಿದ್ದಾಳೆ ? ನಿಮಗೆ ಅವಳ ವಿಷಯ ಗೊತ್ತಿದ್ದು ನೀವು ಹೇಳದೆ ಹೋದರೆ ಮತ್ತು ಚಂದನೆಗೇನಾದರೂ ಹೆಚ್ಚುಕಡಿಮೆಯಾದರೆ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ. ನಿಮಗೆಲ್ಲಾ ಸರಿಯಾಗಿ ದಂಡನೆ ಕೊಡುತ್ತೇನೆ" ಎಂದು ಆರ್ಭಟಿಸಿದನು. ಆದರೂ ಸೇವಕರೆಲ್ಲ ಸುಮ್ಮನೆ ನಿಂತಿದ್ದರು. ಒಬ್ಬ ವೃದ್ಧೆ ಸೇವಕಿಗೆ ಮಾತ್ರ ಸುಮ್ಮನಿರಲಾಗಲಿಲ್ಲ. ಆಕೆಗೆ ಚಂದನೆಯ ಮೇಲೆ ಅಪಾರ ಪ್ರೀತಿಯಿತ್ತು. ಆಕೆ ಚಂದನೆಯನ್ನು ತನ್ನ ಮಗಳಂತೆ ಭಾವಿಸಿದ್ದಳು. ಚಂದನೆಗಾದ ಶಿಕ್ಷೆಯನ್ನು ಕಂಡು ಆಕೆ ಒಳಗೊಳಗೇ ಮರುಗುತ್ತಿದ್ದಳು. ಆಕೆಗೆ ಚಂದನೆಯನ್ನು ಬಂಧನದಿಂದ ಬಿಡಿಸಬೇಕೆನಿಸಿತು. ಆಕೆಯು ಮನಸ್ಸಿನಲ್ಲಿ "ನಾನು ಈಗಾಗಲೇ ಮೃತ್ಯುವಿನ ಸಮೀಪದಲ್ಲಿದ್ದೇನೆ. ಯಜಮಾನಿ ತನ್ನನ್ನು ಏನು ತಾನೆ ಮಾಡಿಯಾಳು, ಶ್ರೇಷ್ಠಿಗೆ ನಡೆದ ವಿಚಾರ ತಿಳಿಸಿದರೆ ಚಂದನೆಗೆ ಒಳಿತಾಗ ಬಹುದು" ಎಂದುಕೊಂಡು ಶ್ರೇಷ್ಠಿಗೆ ಆತನ ಪತ್ನಿಯು ಆಕೆಯನ್ನು ಬಂಧಿಸಿಟ್ಟಿರುವ ಬಗ್ಗೆ ತಿಳಿಸಿಬಿಟ್ಟಳು.

ಶ್ರೇಷ್ಠಿಗೆ ಈ ವಿಚಾರ ತಿಳಿದು ಅಪಾರ ದುಃಖವಾಯಿತು. ತನ್ನ ಹೆಂಡತಿಯನ್ನು ಸೀಳಿಹಾಕುವಷ್ಟು ಕೋಪ ಬಂದಿತು. ಆತನಿಗೆ ಚಂದನೆಯನ್ನು

ಬಂಧನದಿಂದ ಮುಕ್ತಗೊಳಿಸಬೇಕೆನಿಸಿತು. ತಕ್ಷಣವೇ ಆತನು ಚಂದನೆಯನ್ನು ಬಂಧಿಸಿಟ್ಟ ಕೊಠಡಿಯ ಬಳಿ ಬಂದನು. ಅದಕ್ಕೆ ಜಡಿದಿದ್ದ ಬೀಗ ಒಡೆದು ಬಾಗಿಲನ್ನು ತೆರೆದನು. ಒಳಗೆ ಚಂದನೆಯ ಬೇರಿನಿಂದ ಕತ್ತರಿಸಿದ ಬಳ್ಳಿಯಂತೆ ನೆಲದ ಮೇಲೆ ಬಿದ್ದಿದ್ದಳು. ಕಂದಿದ ಮುಖದವಳಾಗಿ ಕಣ್ಣೀರು ಸುರಿಸುತ್ತಿದ್ದಳು. ಸರಪಳಿ ಬಿಗಿದಿದ್ದ ಕೈಕಾಲುಗಳಿಂದ ರಕ್ತ ಸೋರುತ್ತಿತ್ತು, ಆಕೆಯ ಸ್ಥಿತಿ ಕಂಡು ಶ್ರೇಷ್ಠಿಗೆ ಕರುಳು ಕಿತ್ತು ಬರುವಂತಾಯಿತು. ದುಃಖದಿಂದ ಆತ ಕಣ್ಣಿನಿಂದ ನೀರು ಹರಿಯತೊಡಗಿತು. ಆತನು ಆಕೆಯನ್ನು ಸಮಾಧಾನಿಸುತ್ತಾ ''ಮಗಳೇ ಇದೇನು ನಿನ್ನ ಸ್ಥಿತಿ ? ನನಗೆ ನೀನು ಇಂಥ ಸ್ಥಿತಿಯಲ್ಲಿ ಇದ್ದೆ ಎಂದು ತಿಳಿದಿರಲಿಲ್ಲ, ನಿನಗಿಂಥ ಪರಿಸ್ಥಿತಿ ಬರಬಾರದಾಗಿತ್ತು, ನಿನಗೆ ಇಂಥ ಕಷ್ಟ ಒದಗುತ್ತದೆ ಎಂದು ತಿಳಿದಿದ್ದರೆ ನಾನು ನಿನ್ನನ್ನು ಇಲ್ಲಿಗೆ ಕರೆದು ತರುತ್ತಿರಲಿಲ್ಲ, ದಯವಿಟ್ಟು ನನ್ನನ್ನು ಕ್ಷಮಿಸು, ನೀನು ಧೈರ್ಯ ತಂದುಕೋ'' ನಾನು ನಿನಗೆ ಈಗಲೇ ತಿನ್ನಲು ಏನಾದರೂ ತರುತ್ತೇನೆ ಎಂದು ಅಡುಗೆ ಮನೆಗೆ ಹೋದನು. ಅಲ್ಲಿ ಆತನಿಗೆ ಏನೂ ಸಿಗಲಿಲ್ಲ, ಸ್ವಲ್ಪ ಆಹಾರ ಮಾತ್ರ ಸಿಕ್ಕಿತು. ಆತ ಅದನ್ನೇ ತಂದು ಚಂದನೆಗೆ ಕೊಡುತ್ತಾ ತೆಗೆದುಕೋ ಮಗಳೇ, ಈ ಆಹಾರ ಮಾತ್ರ ಸಿಕ್ಕಿತು. ಸದ್ಯಕ್ಕೆ ಇದನ್ನೇ ಸ್ವೀಕರಿಸು. ನಾನು ಹೋಗಿ ಕಮ್ಮಾರನನ್ನು ಕರೆದುಕೊಂಡು ಬರುತ್ತೇನೆ. ನಿನ್ನ ಬೇಡಿಗಳನ್ನು ತೆಗೆಸುತ್ತೇನೆ ಎಂದು ಕಮ್ಮಾರನನ್ನು ಕರೆದುಕೊಂಡು ಬರಲು ಹೋದನು.

ಚಂದನೆಯು ಮನಸ್ಸಿನಲ್ಲಿ ಈ ರೀತಿ ಯೋಚಿಸುತ್ತಿದ್ದಳು. '' ಒಂದು ಕಾಲದಲ್ಲಿ ನಾನು ರಾಜಕನ್ಯೆಯಾಗಿದ್ದೆ, ಅರಮನೆಯಲ್ಲಿ ಸುಖದ ಸುಪ್ಪತ್ತಿಗೆಯಲ್ಲಿ ಓಲಾಡುತ್ತಿದ್ದೆ, ಬಗೆಬಗೆಯ ಭಕ್ಷ್ಯಭೋಜನಗಳನ್ನು ತಿನ್ನುತ್ತಿದ್ದೆ, ದಾಸದಾಸಿಯರು ನನ್ನ ಸೇವೆಮಾಡುತ್ತಿದ್ದರು, ಅರಮನೆಯ ಭೋಜನಾಲಯದಲ್ಲಿ ಸಾವಿರಾರು ಜನರು ಊಟಮಾಡುತ್ತಿದ್ದರು, ಎಷ್ಟೋ ವೇಳೆ ತಾನೇ ಅನ್ನದಾನ ಮಾಡುತ್ತಿದ್ದೆ. ಆದರೆ ಈಗ ತನಗೆಂಥ ಹೀನಸ್ಥಿತಿ ಬಂದಿದೆ. ನಾನು ಈ ಬಂಧೀಗೃಹದಲ್ಲಿ ದಾಸಿಯಂತೆ ಬಿದ್ದಿದ್ದೇನೆ. ವಿಧಿ ಎಲ್ಲಿಂದ ಎಲ್ಲಿಗೆ ಎಳೆಯುತ್ತದೆ. ವೈಭವದ ಶಿಖರದಿಂದ ದಾರಿದ್ರ್ಯ, ಹಾಗೂ ದಾಸ್ಯತ್ವಕ್ಕೆ ಎಷ್ಟು ಬೇಗ ಬಿದ್ದುಬಿಟ್ಟೆ. ಪ್ರಾಯಶಃ ಇದೆಲ್ಲಾ ಪೂರ್ವಜನ್ಮದ ಕರ್ಮಫಲವೇ ಇರಬೇಕು'' ಎಂದೆಲ್ಲಾ ಯೋಚಿಸಿ ದುಃಖಿಸುತ್ತಿದ್ದಳು. ಅವಳ ಕಣ್ಣಿಂದ ನೀರು ಹರಿಯತೊಡಗಿತು.

ಹೀಗೆ ಯೋಚಿಸುತ್ತಾ ಯೋಚಿಸುತ್ತಾ ತನ್ನ ಮುಂದಿದ್ದ ಆಹಾರವನ್ನು ನೋಡಿದಳು. ಯಾರಾದರೂ ಬಂದರೆ ಅವರಿಗೆ ದಾನ ಮಾಡಬಹುದು ಎಂದು ಯೋಚಿಸುತ್ತಿದ್ದಳು. ಕಷ್ಟದಲ್ಲಿದ್ದರೂ ಆಕೆಯ ಮನಸ್ಸು ಧರ್ಮಮಾರ್ಗ ಬಿಡಲಿಲ್ಲ. ಆಕೆ ಆಹಾರವನ್ನು ದಾನಮಾಡಲು ಬಾಗಿಲಕಡೆ ನೋಡತ್ತಿದ್ದಳು. ಆಕೆಗೆ ಪುಣ್ಯೋದಯವಾಯಿತು. ಆಕೆಯ ಸಂಕಷ್ಟಗಳು ದೂರವಾಗುವ ಸಮಯ ಬಂದಿತು. ಮಹಾ ತಪಸ್ವಿಯಾದ ಮಹಾವೀರಸ್ವಾಮಿಯವರು ಆಹಾರಕ್ಕಾಗಿ ಕೌಶಾಂಬಿ ಪುರವನ್ನು ಪ್ರವೇಶಿಸಿದ್ದರು. ಮಹಾವೀರರ ಆಗಮನದಿಂದ ಕೌಶಾಂಬಿಯ ಜನತೆ ಸಂಭ್ರಮಗೊಂಡಿತು. ಊರ ಬೀದಿಗಳೆಲ್ಲ ಸ್ವಚ್ಛವಾಗಿ ಶೃಂಗಾರಗೊಂಡವು. ಎಲ್ಲೆಲ್ಲೂ ಮಹಾವೀರಸ್ವಾಮಿಯ ಜಯಘೋಷ ಕೇಳಿಬರುತ್ತಿತ್ತು. ಈ ಧ್ವನಿ ಕೇಳಿ ಚಂದನೆಯ ಮೈಮನ ಪುಳಕಗೊಂಡಿತು. ಭಕ್ತಿಯು ಆಕೆಯನ್ನಾವರಿಸಿತು.

ಆಕೆಯು ಮಹಾವೀರ ಸ್ವಾಮಿಯನ್ನು ನೋಡಿದಳು, ಸಂತೋಷದಿಂದ ಆಕೆಯ ಕಣ್ಣುತುಂಬಿ ಬಂದಿತು. ಬಹು ಪ್ರಯಾಸದಿಂದ ಆಹಾರದ ತಟ್ಟೆಯನ್ನು ಎತ್ತಿಕೊಂಡಳು. ಸರಪಳಿಬಿಗಿದ ಕಾಲುಗಳನ್ನೆಳೆಯುತ್ತಾ ಕಷ್ಟಪಟ್ಟು ಬಾಗಿಲವರೆಗೆ ಬಂದಳು. ಒಂದು ಕಾಲನ್ನು ಹೊಸ್ತಿಲಿನಿಂದ ಹೊರಗಿಟ್ಟಳು. ಬೇಡಿ ಹಾಕಿದ್ದರಿಂದ ಇನ್ನೊಂದು ಕಾಲನ್ನು ಹೊಸ್ತಿಲ ಹೊರಗೆ ಇಡಲಾಗಲಿಲ್ಲ. ಆದರೆ ಆಕೆಯ ಅಂತರಂಗದಿಂದ ಭಕ್ತಿ ಉಕ್ಕಿ ಬಂದಿತು. ಅವಳು ಭಕ್ತಿತುಂಬಿ ಆರ್ತಧ್ವನಿಯಿಂದ ಮಹಾವೀರ ಸ್ವಾಮಿಯನ್ನು ಕುರಿತು 'ಹೇ ಪ್ರಭು, ಕರುಣಾಳು ಈ ದೀನಳ ಆಹಾರವನ್ನು ಸ್ವೀಕರಿಸು, ಇದು ದಿವ್ಯವಾದ ಆಹಾರವಲ್ಲ, ನಿಮಗೆ ಕೊಡಲು ಯೋಗ್ಯವಾದುದೋ ಅಲ್ಲವೋ ತಿಳಿಯದು. ಆದರೂ ನನ್ನ ಮೇಲೆ ಕೃಪೆ ಇಟ್ಟು ಸ್ವಲ್ಪ ಆಹಾರ ಸ್ವೀಕರಿಸಿ, ನೀವು ಪರೋಪಕಾರಿಗಳು, ನನ್ನನ್ನು ಧನ್ಯಗೊಳಿಸು'' ಎಂದು ಬೇಡಿಕೊಂಡಳು.

ಮಹಾವೀರರ ಕೃಪಾದೃಷ್ಟಿ ಆಕೆಯೆಡೆಗೆ ಹರಿಯಿತು. ತಪಸ್ವಿಗಳ ಕೃಪಾದೃಷ್ಟಿಗಿಂತ ಮಿಗಿಲಾದದ್ದು ಯಾವುದಿದೆ ಈ ಲೋಕದಲ್ಲಿ ? ಚಂದನೆಯ ಕಷ್ಟವೆಲ್ಲ ಮಂಜಿನಂತೆ ಕರಗತೊಡಗಿತು. ಮಹಾವೀರ ಸ್ವಾಮಿಯು ಆಹಾರ ಸ್ವೀಕರಿಸಲು ಆಕೆಯೆಡೆಗೆ ಕೈ ಚಾಚಿದರು. ಇದನ್ನು ಕಂಡ ಚಂದನೆಯ ಹೃದಯ ನಲಿಯಿತು. ನಿರ್ಮಲ ಭಕ್ತಿಗೆ ಭಗವಂತನು ಮಣಿಯಲೇ ಬೇಕಲ್ಲವೇ ?

ಚಂದನೆಯ ಅನನ್ಯ ಭಕ್ತಿಗೆ ಮಹಾವೀರಸ್ವಾಮಿ ವಿಸ್ಮಿತರಾದರು. ಚಂದನಾದೇವಿಯ ಚಂದದ ಭಕ್ತಿಗೆ ಮುನಿಪತಿ ಮಂದಾರಪರ್ವತದಂತೆ ನಿಶ್ಚಲವಾಗಿ ನಿಂತುಬಿಟ್ಟರು. ಚಂದನೆಗೆ ಸರಿಸಮಾನರಾದವರು ಯಾರು ? ಆಕೆಯ ಅನನ್ಯ ಭಕ್ತಿಯ ಪ್ರಭಾವದಿಂದ ಚಮತ್ಕಾರವೇ ನಡೆಯಿತು. ಆಕೆಯ ಕೈಕಾಲಿಗೆ ಬಿಗಿದಿದ್ದ ಸರಪಳಿ ತನ್ನಿಂದ ತಾನೆ ಬಿಚ್ಚಿಕೊಂಡಿತು. ಆಕೆ ಉಟ್ಟಿದ್ದ ಒರಟು ಕಂಬಳಿ ಸುಂದರವಾದ ಸೀರೆಯಾಯಿತು. ಬೋಳಾಗಿದ್ದ ಅವಳ ತಲೆ ಸುಂದರವಾದ ನೀಳಕೂದಲಿನಿಂದ ಕಂಗೊಳಿಸಿತು. ಚಿನ್ನದ ಆಭರಣ ಆಕೆಯ ಮೈಯನ್ನಲಂಕರಿಸಿತು. ಆಕೆಯ ಸೌಂದರ್ಯ ದೇವತೆಯಂತೆ ಕಂಗೊಳಿಸಿದಳು. ಆಕೆ ಮಹಾವೀರರಿಗೆ ಆಹಾರ ನೀಡಲು ತಟ್ಟೆಗೆ ಕೈಹಾಕಿದಳು. ತಟ್ಟೆಯಲ್ಲಿದ್ದ ಆಹಾರ ದಿವ್ಯಾನ್ನವಾಯಿತು. ಚಂದನೆ ನೀಡಿದ ಆಹಾರವನ್ನು ಮಹಾವೀರರು ತುಂಬು ಹೃದಯದಿಂದ ಸ್ವೀಕರಿಸಿದರು. ಕೌಶಾಂಬಿಯ ಜನತೆ ಮಹಾವೀರರು ಚಂದನೆಯಿಂದ ಆಹಾರ ಸ್ವೀಕರಿಸುತ್ತಿರುವ ದೃಶ್ಯವನ್ನು ಮೂಕವಿಸ್ಮಿತರಾಗಿ ನೋಡುತ್ತಿದ್ದರು. ಅವರೆಲ್ಲರೂ ಚಂದನೆಯ ಸೌಭಾಗ್ಯವನ್ನು ಹಾಡಿ ಹೊಗಳಿದರು. ಮಹಾವೀರರು ಚಂದನೆಯನ್ನು ಮನತುಂಬಿ ಹರಸಿ ಕಾಡಿಗೆ ತೆರಳಿದರು. ಚಂದನೆಯ ಕರ್ಮವು ಉಪಶಮನಗೊಂಡು ಬಾಳು ಧನ್ಯವಾಯಿತು.

ಕಮ್ಮಾರನನ್ನು ಕರೆತರಲು ಹೋಗಿದ್ದ ಶ್ರೇಷ್ಠಿ ಕಮ್ಮಾರನೊಂದಿಗೆ ಹಿಂದಿರುಗುವಷ್ಟರಲ್ಲಿ ಚಂದನೆ ಮಹಾವೀರರಿಗೆ ಆಹಾರದಾನಗೈಯುತ್ತಿರುವ ದೃಶ್ಯ ಕಂಡು ಶ್ರೇಷ್ಠಿಗಂತೂ ಅಪರಿಮಿತ ಆನಂದವಾಯಿತು. ತನ್ನ ಮನೆಯ ಆಹಾರ ವಿಶ್ವಚೇತನವನ್ನೂ ತಣಿಸಿತು ಎಂದು ಹಿರಿಹಿರಿ ಹಿಗ್ಗಿದನು. ಮಹಾವೀರರು ಮನೆಯ ಬಾಗಿಲಲ್ಲಿ ಆಹಾರ ಸ್ವೀಕರಿಸಿದ್ದರಿಂದ ತನ್ನ ಮನೆ ಪಾವನವಾಯಿತೆಂದು ಕೊಂಡನು. ಇದೆಲ್ಲ ತನ್ನ ಪೂರ್ವಜನ್ಮದ ಪುಣ್ಯ ಎಂದು ಭಾವಿಸಿದನು. ಇದಕ್ಕೆಲ್ಲಾ ಕಾರಣಳಾದ ಚಂದನೆ ಆತನ ಕಣ್ಣಿಗೆ ದೇವಿಯಂತೆ ಕಂಡಳು. ಚಂದನೆಗೆ ತಾನು ಆಶ್ರಯ ನೀಡಿದ್ದು ಸಾರ್ಥಕವಾಯಿತೆಂದೂ, ಆಕೆಯಿಂದ ತಾನೂ ಧನ್ಯನಾದೆ ನೆಂದು ಕೊಂಡನು.

ಆ ಪುರದ ಅರಸನ ಪತ್ನಿ ಮೃಗಾವತಿ ಅಂದರೆ ಚಂದನೆಯ ಅಕ್ಕ. ಆಕೆಯು ಚಂದನೆಯ ಅಪಹರಣವಾದಾಗಿನಿಂದಲೂ ಚಂದನೆಗಾಗಿ ಶೋಕಿಸುತ್ತಿದ್ದಳು. ಆಕೆಯನ್ನು ಕಾಣಲು ಹಂಬಲಿಸುತ್ತಿದ್ದಳು. ಆಕೆಯನ್ನು ಹುಡುಕಲು ಭಟರನ್ನು

ಬಿಟ್ಟಿದ್ದಳು. ಆದರೆ ತಂಗಿಯ ವಿಚಾರ ತಿಳಿಯದೆ ಆಕೆಗಾಗಿ ದಿನವೂ ಭಗವಂತನಲ್ಲಿ ಪ್ರಾರ್ಥಿಸುತ್ತಿದ್ದಳು. ತನ್ನ ಪುರದಲ್ಲಿ ಮಹಾವೀರ ಸ್ವಾಮಿಯು ಆಹಾರ ಸ್ವೀಕರಿಸಿದ ವಿಚಾರ ತಿಳಿದು ಬಂದಿತು. ಆದರೆ ಅವರಿಗೆ ಆಹಾರದಾನ ಮಾಡಿದ ಪುಣ್ಯಜೀವಿ ಯಾರೆಂದು ತಿಳಿಯಲಿಲ್ಲ. ಅವಳು ತನ್ನ ಸಖಿಯೊಡನೆ ಮಹಾವೀರ ಸ್ವಾಮಿಗೆ ಆಹಾರ ನೀಡಿದ ಪುಣ್ಯಜೀವಿ ಯಾರು ? ಎಂದು ವಿಚಾರಿಸಿದಳು. ಆಗ ಮಹಾವೀರರಿಗೆ ಆಹಾರ ನೀಡಿದ ಪುಣ್ಯವತಿ ತನ್ನ ತಂಗಿ ಚಂದನೆ ಎಂದು ತಿಳಿಯಿತು. ಆಗ ಆಕೆಗಾದ ಆನಂದ ಹೇಳತೀರದು. ಹುಡುಕುತ್ತಿದ್ದ ಬಳ್ಳಿ ಕಾಲಿಗೆ ತೊಡರಿದಂತಾಯಿತು. ಆಕೆ ತನ್ನ ಪತಿಗೆ ಈ ವೃತ್ತಾಂತ ತಿಳಿಸಿದಳು. ಆತನಿಗೂ ಬಹಳ ಸಂತೋಷವಾಯಿತು. ಮೃಗಾವತಿ ತನ್ನ ಪತಿಯೊಂದಿಗೆ ಚಂದನೆಯನ್ನು ನೋಡಲು ಬಂದಳು. ಕಳೆದುಹೋಗಿದ್ದ ತಂಗಿಯನ್ನು ಕಂಡು ಸಂತೋಷದಿಂದ ಆಲಂಗಿಸಿಕೊಂಡಳು. ಆಕೆಯ ಕಣ್ಣಿನಿಂದ ಆನಂದಬಾಷ್ಪ ಸುರಿಯಿತು. ಮಹಾಶ್ರಮಣ ಮಹಾವೀರರಿಗೆ ಆಹಾರ ನೀಡಿದ ನೀನೇ ಧನ್ಯೆ ಎಂದಳು.

ಚಂದನೆಯ ವಿಚಾರ ಶ್ರೇಷ್ಠಿಯ ಪತ್ನಿಗೂ ತಿಳಿಯಿತು. ಶ್ರೇಷ್ಠಿಯು ತನ್ನ ಪತ್ನಿಗೆ ಬುದ್ಧಿವಾದ ಹೇಳಿದನು. ಆಕೆಯೂ ಪಶ್ಚಾತ್ತಾಪ ಪಟ್ಟಳು. ತನ್ನ ತಪ್ಪಿನ ಅರಿವಾಯಿತು. ಆಕೆಗೆ ಚಂದನೆಯ ಮಹತ್ವ ತಿಳಿದು, ಚಂದನೆಯ ಬಳಿಗೆ ಬಂದು ಕ್ಷಮೆ ಯಾಚಿಸಿದಳು, ಆಕೆಯ ಮಹಿಮೆಯನ್ನು ಹೊಗಳಿದಳು. ಸಜ್ಜನರು ಎಂದೂ ಬೇರೆಯವರ ದುರ್ಗುಣಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದಿಲ್ಲ. ಚಂದ್ರನನ್ನಾಗಲಿ ಚಿನ್ನವನ್ನಾಗಲಿ ಯಾರಾದರೂ ನಿಂದಿಸಿದರೆ ಅದು ತನ್ನಗುಣವನ್ನು ಬಿಡಲಾರದು. ಹಾಗೆ ಚಂದನೆಯು ಶ್ರೇಷ್ಠಿಯ ಹೆಂಡತಿಯು ತನಗೆ ಎಷ್ಟೇ ಕಷ್ಟ ಕೊಟ್ಟಿದ್ದರೂ, ಎಷ್ಟೇ ನಿಂದಿಸಿದ್ದರೂ, ಮನಸ್ಸಿನಲ್ಲಿಟ್ಟುಕೊಳ್ಳದೆ ವಿಶಾಲ ಹೃದಯದಿಂದ ಆಕೆಯನ್ನು ಕ್ಷಮಿಸಿಬಿಟ್ಟಳು ಮತ್ತು ಇದರಲ್ಲಿ ಆಕೆಯ ತಪ್ಪಿಲ್ಲ ವೆಂದೂ ಎಲ್ಲವೂ ತನ್ನ ಪೂರ್ವಜನ್ಮದ ಕರ್ಮಫಲ ಎಂದಳು. ಸದ್ಗುಣಿಗಳು ಯಾವಾಗಲೂ ಹೀಗೆಯೇ ಅಲ್ಲವೇ ? ಅವರು ಎಂದೂ ಪರರನ್ನು ನಿಂದಿಸುವುದಿಲ್ಲ.

ಅಕ್ಕ ಮೃಗಾವತಿಯು ಚಂದನೆಯನ್ನು ತನ್ನ ಅರಮನೆಗೆ ಕರೆ ತಂದಳು. ಅವರಿಬ್ಬರೂ ಅರಮನೆಯಲ್ಲಿ ಸಂತೋಷದಿಂದ ಕಾಲಕಳೆಯುತ್ತಿದ್ದರು. ಬಂಧುಗಳ ಸಮಾಗಮಕ್ಕೆ ಸಮಾನವಾದುದು ಯಾವುದಿದೆ ಈ ಲೋಕದಲ್ಲಿ ? ಅವರಿಬ್ಬರಿಗೂ

ಕಾಲ ಉರುಳುತ್ತಿದ್ದುದೇ ತಿಳಿಯುತ್ತಿರಲಿಲ್ಲ. ಇತ್ತ ಚಂದನೆಯ ತಂದೆ - ತಾಯಿಯರು ಇವಳ ಅಪಹರಣವಾದಾಗಿನಿಂದಲೂ ಆಕೆಯನ್ನು ನೆನೆನೆನೆದು ದುಃಖಿಸುತ್ತಿದ್ದರು. ಅವರಿಗೆ ಬದುಕಿನಲ್ಲಿ ಆಸಕ್ತಿಯೇ ಇರಲಿಲ್ಲ. ನಿದ್ರೆ, ಆಹಾರಗಳ ಕಡೆಗೆ ಗಮನಕೊಡದೆ ಆಕೆಗಾಗಿ ಸದಾ ಹಂಬಲಿಸುತ್ತಿದ್ದರು. ಅವರ ಸ್ಥಿತಿ ಶೋಚನೀಯವಾಗಿತ್ತು. ಮಗಳನ್ನು ಯಾರು ಒಯ್ದರೋ ? ಎಲ್ಲಿದ್ದಾಳೋ? ಯಾವ ಕಷ್ಟ ಅನುಭವಿಸುತ್ತಿದ್ದಾಳೋ ? ಇತ್ಯಾದಿಯಾಗಿ ಚಿಂತಿಸಿ ಚಿಂತಿಸಿ ಹಣ್ಣಾಗಿದ್ದರು. ಎಲ್ಲಾ ದಿಕ್ಕಿಗೂ ಭಟರನ್ನು ಅಟ್ಟಿ ಚಂದನೆಯನ್ನು ಹುಡುಕಿ ತರುವಂತೆ ಆದೇಶ ನೀಡಿದರು ಹಾಗೂ ಚಂದನೆಯನ್ನು ಹುಡುಕಿ ತಂದವರಿಗೆ ಬಹುಮಾನ ಕೊಡುವುದಾಗಿ ಘೋಷಿಸಿದ್ದರು.

ಹೀಗಿರುವಾಗ ಕೌಶಾಂಬಿಯ ಚಾರನೊಬ್ಬನು ಚೇಟಕರಾಜನಲ್ಲಿಗೆ ಬಂದು ಚಂದನೆಯು ಕೌಶಾಂಬಿಯಲ್ಲಿ ತನ್ನ ಅಕ್ಕ ಮೃಗಾವತಿಯೊಂದಿಗೆ ಕ್ಷೇಮದಿಂದ ಇರುವಳು ಎಂದು ಶುಭವಾರ್ತೆಯನ್ನು ತಿಳಿಸಿದನು. ಆತನ ಸಂತೋಷ ಎಲ್ಲೆ ಮೀರಿತು. ಶುಭ ವಾರ್ತೆ ತಂದಂತಹ ಚಾರನಿಗೆ ಚೇಟಕನು ಸೂಕ್ತ ಬಹುಮಾನ ಕೊಟ್ಟು ಗೌರವಿಸಿದನು. ಅಲ್ಲದೆ ಚಂದನೆ ಸಿಕ್ಕಿದ ವಿಷಯವನ್ನು ಎಲ್ಲೆಡೆ ಡಂಗುರ ಹೊಡೆಸಿದನು. ತಂದೆ ತಾಯಿ ಬಂಧು ಬಳಗದವರೆಲ್ಲರೂ ಚಂದನೆಯನ್ನು ನೋಡಲು ಕಾತುರದಿಂದ ಕೌಶಂಬಿಗೆ ಬಂದರು. ಮಗಳನ್ನು ಕಂಡು ಅವರಿಗಾದ ಸಂತೋಷ ಅಷ್ಟಿಷ್ಟಲ್ಲ. ಅವರಿಗೆ ಕಳೆದು ಹೋದ ಅಪೂರ್ವನಿಧಿ ಮತ್ತೆ ಸಿಕ್ಕಷ್ಟು ಸಂತೋಷವಾಯಿತು.

ಬಳಗದವರೆಲ್ಲಾ ಚಂದನೆಯನ್ನು ಸುತ್ತುವರಿದು ಯಾರು ನಿನ್ನನ್ನು ಕದ್ದೊಯ್ದರು ? ಯಾರು ಯಾರು ಯಾವ ಯಾವ ಹಿಂಸೆ ಕೊಟ್ಟರು ? ಇಷ್ಟು ದಿನ ನೀನು ಎಲ್ಲಿದ್ದೆ ಹೇಗಿದ್ದೆ ? ಯಾರು ನಿನ್ನನ್ನು ನಗರಕ್ಕೆ ಸೇರಿಸಿದರು ? ಎಂದು ನಾನಾ ಬಗೆಯಾಗಿ ಪ್ರಶ್ನಿಸಿದರು. ಚಂದನೆಯು ಗಂಧರ್ವನು ತನ್ನನ್ನು ಕರೆದೊಯ್ದಾಗಿನಿಂದ ತಾನು ಅನುಭವಿಸಿದ ಕಷ್ಟಗಳನ್ನು ಮತ್ತು ಮಹಾವೀರ ಸ್ವಾಮಿಯ ದರ್ಶನದಿಂದ ತನ್ನ ಕಷ್ಟಗಳು ನಿವಾರಣೆಯಾದ ವಿಷಯವನ್ನು ವಿವರವಾಗಿ ತಿಳಿಸಿದಳು. ಅವಳು ಅನುಭವಿಸಿದ ಕಷ್ಟಗಳನ್ನು ಮಹಾವೀರರ ದರ್ಶನ ಮಹಿಮೆಯನ್ನು ತಿಳಿದು ಬಂಧು ಬಾಂಧವರಿಗೆ ಆಶ್ಚರ್ಯವಾಯಿತು.

ನಂತರ ಚಂದನೆ ತಂದೆತಾಯಿಯವರೊಂದಿಗೆ ವೈಶಾಲಿಗೆ ಬಂದಳು. ಚಂದನೆಯ ಆಗಮನ ಇಡೀ ನಗರಕ್ಕೇ ಸಂತಸ ತಂದಿತು. ಇದುವರೆಗೂ ಸ್ಮಶಾನದಂತಿದ್ದ ನಗರದಲ್ಲಿ ಒಮ್ಮೆಲೆ ಹಬ್ಬದ ವಾತಾವರಣ ಉಂಟಾಯಿತು. ನಾಡಿನ ತುಂಬ ಮಂಗಳವಾದ್ಯ ಮೊಳಗಿದನು. ದೇವಸ್ಥಾನಗಳಲ್ಲಿ ಪೂಜೆ ಪುನಸ್ಕಾರಗಳು ನಡೆದವು. ಚಂದನೆಯು ತಂದೆತಾಯಿಯರ ಮನಸ್ಸಿಗೆ ಆನಂದದ ಪ್ರವಾಹವನ್ನೇ ಹರಿಸಿದಳು. ಆಕೆಯು ಸುಕುಮಾರ ದೇಹದಿಂದ, ಪಾವಿತ್ರ್ಯ ಗುಣದಿಂದ, ಸಕಲ ಸೌಭಾಗ್ಯದಿಂದ ಶೋಭಿಸುತ್ತಿದ್ದಳು, ಆಕೆಯ ಆಗಮನ ಕಾಡಿಗೆ ಹೋದ ಸಿರಿ ಪುನಃ ನಾಡಿಗೆ ಬಂದಂತಾಯಿತು. ಇಡೀ ನಾಡೇ ಸಂಭ್ರಮದಿಂದ ನಲಿಯುತ್ತಿತ್ತು, ತಂದೆತಾಯಿಯರು ಹಿಂದಿನ ದುಃಖವನ್ನು ಮರೆತರು.

ಇಷ್ಟೆಲ್ಲ ಸಂಭ್ರಮದ ಮಧ್ಯೆ ಚಂದನೆಯು ಮಾತ್ರ ಹಿಂದೆ ತಾನು ಅನುಭವಿಸಿದ ಕಷ್ಟಗಳ ಬಗ್ಗೆ ಮೆಲುಕು ಹಾಕುತ್ತಿದ್ದಳು. ಅಷ್ಟೇ ಅಲ್ಲ ''ಈ ಸಂಸಾರ ಹಿಂಸೆಗೆ ಕಾರಣವೆಂದೂ, ಹಿಂಸೆಯು ದುಃಖಕ್ಕೆ ಸಾಧನವೆಂದೂ, ಈ ಕಾರಣದಿಂದಲೇ ಮುನಿಗಳು ಸಂಸಾರದಿಂದ ದೂರವಿರುವರೆಂದೂ, ಈ ಶರೀರ ಒಂದಲ್ಲ ಒಂದು ದಿನ ಯಮನಿಗೆ ವಶವಾಗುವುದೆಂದು ಚಿಂತಿಸುತ್ತಿದ್ದಳು.'' ದುಃಖಕ್ಕೆ ಕಾರಣವಾದ ಈ ಸಂಸಾರದ ಬಗ್ಗೆ ಆಕೆಗೆ ವಿರಕ್ತಿ ಉಂಟಾಯಿತು. ನೋವಿಗೆ ಕಾರಣವಾಗುವ ಲೌಕಿಕ ಜೀವನದ ಸಹವಾಸದಿಂದ ದೂರವಿರಬೇಕೆನಿಸಿತು. ಆತ್ಮ ಕಲ್ಯಾಣದ ಬಗ್ಗೆ ಆಕೆಯು ಚಿಂತಿಸತೊಡಗಿದಳು. ಭವಬಂಧನದಿಂದ ಮುಕ್ತಿ ಪಡೆಯಬೇಕೆನಿಸಿತು. ಆಕೆಯ ವರ್ತನೆಯಲ್ಲಿ ಬದಲಾವಣೆಯಾಯಿತು. ಮನಸ್ಸು ಸದಾ ಏನನ್ನೋ ಚಿಂತಿಸುತ್ತಿತ್ತು, ದಿನದಿನಕ್ಕೆ ಆಕೆಯಲ್ಲಿ ಆಧ್ಯಾತ್ಮ ಚಿಂತನೆ ಹೆಚ್ಚಾಯಿತು. ತಂದೆತಾಯಿಯರಿಗೆ ಆಕೆಯ ವರ್ತನೆ ಕಂಡು ಆಶ್ಚರ್ಯ ತಂದಿತು. ಆಕೆಗೆ ವಿವಾಹಮಾಡಿದರೆ ಆಕೆ ಸರಿಹೋಗಬಹುದೆಂದು ವರನನ್ನು ಹುಡುಕಲು ಪ್ರಾರಂಭಿಸಿದರು. ಆದರೆ ಚಂದನೆ ಲೌಕಿಕ ಜೀವನದ ಸಂಪರ್ಕವೇ ಬೇಡವೆಂದು ವಿವಾಹವನ್ನು ತಿರಸ್ಕರಿಸಿದಳು. ಯಾರು ಎಷ್ಟೇ ತಡೆದರೂ ಅಷ್ಟೈಶ್ವರ್ಯ ತುಂಬಿದ್ದ ಅರಮನೆಯನ್ನು ತೊರೆದಳು.

ದೇವೇಂದ್ರನ ಆಸ್ಥಾನಕ್ಕಿಂತಲೂ ರಮಣೀಯವೂ ಪವಿತ್ರವೂ ಆದ ಸಮವಸರಣವನ್ನು ಪ್ರವೇಶಿಸಿದಳು. ಅಲ್ಲಿ ಶಾಂತತೆಯೇ ಸಾಕಾರಗೊಂಡಂತಿದ್ದ

ಮಹಾವೀರಸ್ವಾಮಿಗೆ ವಂದಿಸಿದಳು. ಅಲ್ಲಿದ್ದ ಗುರುಗಳಿಗೂ ವಂದಿಸಿ ಆಶೀರ್ವಾದ ಪಡೆದಳು. ಗುರುಗಳಿಂದ ಪೂರ್ವಜನ್ಮದ ಕಥೆಯನ್ನು ಕೇಳಿ ಭವಬಂಧನಕ್ಕೆ ಕಾರಣವಾಗುವ ಲೌಕಿಕ ಪ್ರಪಂಚದ ಬಗ್ಗೆ ಸಂಪೂರ್ಣ ವಿರಕ್ತಿ ಹೊಂದಿದಳು. ಮುಕ್ತಿಗೆ ಸಾಧನವಾದ ದೀಕ್ಷೆಯನ್ನು ಆ ಕ್ಷಣವೇ ಸ್ವೀಕರಿಸಿದಳು. ನಿತ್ಯವೂ ಆಧ್ಯಾತ್ಮ ಚಿಂತನೆ, ಸ್ವಾಧ್ಯಾಯ ನಡೆಸಿ ಆತ್ಮನನ್ನು ಶುದ್ಧಗೊಳಿಸಿದಳು. ಆಧ್ಯಾತ್ಮ ಸುಖ ಕಂಡು ಆಕೆ ಲೌಕಿಕ ಜಗತ್ತನ್ನು ಸಂಪೂರ್ಣ ಮರೆತಳು. ಅಲ್ಲಿದ್ದ ಮುವತ್ತಾರು ಸಾವಿರ ಆರ್ಯಿಕೆಯರಿಗೆ ನಾಯಕಿಯಾದಳು.

**ಕರ್ಮವನ್ನು ನಾಶಗೊಳಿಸುವ ಶುದ್ಧವಾದ ಶಾಂತಿಯನ್ನು ಬಯಸುವ ಭವ್ಯಾತ್ಮರು ಎಂದೂ ಧರ್ಮವನ್ನು ಮರೆಯುವುದಿಲ್ಲ ಎಂಬುದಕ್ಕೆ ಸಾಕ್ಷಿಯಾದಳು ಚಂದನಾಂಬಿಕೆ. ಅವಳ ಬದುಕಿನ 'ರೀತಿ ಮನು ಕುಲಕ್ಕೇ ಮಾರ್ಗದರ್ಶನ.**

# ಚಂದನಾಂಬಿಕೆ ಕಾವ್ಯದ ಸೂಕ್ತಿಗಳು

ಧರೆಯೆಲ್ಲ ನಂಟರು ಸುರರೆಲ್ಲ ಬಂಟರು
ಪರರೆಲ್ಲ ಮಿತ್ರರವನೆ ದೇವ । ಮನದೊಳು
ದರುಶನ ದೇವಿ ಬೆಳಗಳು ॥ ( ೪-೫೧ )

ಕ್ಷೀರದೊಡಗೂಡಿ ಸಾರ ಕೆಡರ ಮಾಡಿ
ವಾರಿ ಕಿಚ್ಚಿಂದ ಕೆಡುವಂತೆ । ಸುಜನಗೆ
ಸೇರದ ಜನರಿಗೆ ಉಳುವುಂಟೆ ॥ (೪-೮೬ )

ಕಳಬಲ್ಲ ಮನುಜರು ಬಲುಹುಸಿಯ ನುಸುಳಿಂದ
ಹೊಳೆಯಲಜ್ಞಯರೆ ಹುಸಿಯೊಡ । ಹುಟ್ಟಿತು
ಕಳವೆಂದು ಬಲ್ಲರೂರೆವರು ॥ (೪-೩೧ )

ಕಳವೆಲ್ಲಿ ಮೊಳೆದುದು ಕೊಲೆ ಹುಸಿ ದುಃಖವು
ಸಲೆ ಕಾಂಕ್ಷೆಯಲ್ಲಿ ಬೆಳವವು । ಎಲ್ಲವ
ತಿಳಿವುದು ಪರದರೊಳಗೀಗ ॥ (೪-೩೩ )

ಅಂಜೆನು ಸಿಂಹಕ್ಕೆ ಅಂಜೆ ಮಾತಂಗಕ್ಕೆ
ಅಂಜೆ ಅಂಜಿಸುವ ಸಿಡಿಲಿಗೆ । ಕೆಳೆಯುಳೆ
ಅಂಜುವೆ ಪರರ ನಿಂದೆಗೆ ॥ (೩-೧೫ )

ಸತಿಯರ ಕಾಯದ ಅತಿಶಯ ಪರರಿಗೆ
ಹಿತಗೆತಿ ಮತಿಯ ಕೆಡಿಪುದು । ತಮಗದು
ಹಿತಗೆತಿ ಮತಿಯ ಕೆಡಿಸದೆ ॥ (೨-೮೫ )

ಪರಧನ ಪರಸತಿ ಪರನಿಂದೆಗೆಣಿಸದ
ನರಮಣಿ ಇಂದ ಮತ್ತೊಬ್ಬ । ಲೋಕಕೆ
ಗುರುವಿಲ್ಲವಿದು ಸಂಶಯವಿಲ್ಲ ॥ ( ೪-೧೨೦ )